ESTD: 1919 ಸ್ಥಾಪನೆ

Registered No. M. 4468

ಚಂದಾ ದರ.
ಸ್ಥಳೀಯರಿಗೆ
4—8—0
ಪರಸ್ಥಳೀಯರಿಗೆ
6—2—0
ಬಿಡಿ ಸಂಚಿಕೆಃ
ಮಂಗಳವಾರ 0—1—6
ಶುಕ್ರವಾರ 0—0—6
ಕಾರ್ಯಾಲಯ
ರಥಬೀದಿ, ಮಂಗಳೂರು

ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಏಪ್ರಿಲ್ ತಾ. ೩೦ನೇ ಮಂಗಳವಾರ [ಸಂಚಿಕೆ ೯
VOL·XXVIII] MANGALORE, TUESDAY 30 APRIL, 1946 [NO. 9

Work Executed by Skilled Artists
Oil Paintings
Commercial Drawings
Cinema Slides
Etc. Etc.
Shevgoor Fine Arts
CAR ST. MANGALORE.

ಪ್ರಕಾಶಂರವರು ಪ್ರಕಾಶಕ್ಕೆ ಬಂದರು.

ರಾಜಾಜಿಯವರ ಪಕ್ಷಪಾತಿಗಳ ಯತ್ನ ವಿಫಲವಾಯಿತು.

(ಲೇಖಕಃ—ಶ್ರೀ. ಕೆ. ಕೃಷ್ಣರಾವ್, ಬಿ. ಎ)

ಮದ್ರಾಸ್ ನ್ಯಾಯಎಧಾಯಕ ಸಭೆಗಳಿಗೆ ಚುನಾವಣೆಗಳು ನಡೆದು ಸಮಯವು ಬಹಳವಾದರೂ, ಅಲ್ಲಿ ಮಂತ್ರಿ ಮಂಡಲ ಸ್ಥಾಪನೆಯ ಕಾರ್ಯವು ಮಾತ್ರ ಬಹಳ ಮಟ್ಟಿಗೆ ಹಿಂದಾಯಿತು. ಇದಕ್ಕೆ ಕಾರಣಗಳನೇಕ ಇವೆ. ಒಂದೆಡೆ ಮಾಜಿ ಪ್ರಧಾನ ಶ್ರೀ॥ ರಾಜಗೋಪಾಲಾಚಾರ್ಯರ ಅನುಯಾಯಿಗಳು ಅವರನ್ನೇ, ಯಾವ ಎಧದಲ್ಲಾದರೂ ಪುನಃ ಪ್ರಧಾನರನ್ನಾಗಿ ತರಬೇಕೆಂಬ ಪ್ರಯತ್ನ ಮಾಡಿದುದು; ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯವರು ತಮ್ಮ ಸ್ಥಾನದ ಘನಸ್ಥಿಕೆಯನ್ನು ಸ್ವಲ್ಪ ಮರೆತಂತೆ, ಒಬ್ಬ ವ್ಯಕ್ತಿಯನ್ನು ಅಧಿಕಾರ ಸ್ಥಾನಕ್ಕೇರಿಸಲು ಹವಣಿಸಿದುದು; ಆಂಧ್ರ-ತಮಿಳು ನಾಡಿನವರೊಳಗೆ ಈ ಅಧಿಕಾರ ಸ್ಥಾನವನ್ನು ತಮ್ಮ ತಮ್ಮ ಪ್ರಾಂತದವರ ಕೈಯೊಳಗಿರಿಸಿಕೊಳ್ಳಬೇಕೆಂಬ ಆತುರ ಕಂಡುಬಂದುದು —ಈ ಎಲ್ಲ ಕಾರಣಗಳಿಂದ ಮಂತ್ರಿಮಂಡಲ ರಚಿಸುವ ಕಾರ್ಯವು ಹಿಂದೆ ಬೀಳುವಂತಾಯಿತು.

ಶ್ರೀ॥ ರಾಜಗೋಪಾಲಾಚಾರ್ಯರ ಅನುಯಾಯಿಗಳು, ಅವರನ್ನು ಪ್ರಾಂತದ ಕಾಂಗ್ರೆಸ್ ನ್ಯಾಯಎಧಾಯಕ ಪಕ್ಷದ ನಾಯಕರನ್ನಾಗಿ ಮಾಡಬೇಕೆಂಬ ಅಭಿಪ್ರಾಯದಿಂದ, ತಮಿಳು ನಾಡಿನಲ್ಲಿ ರಾಜಾಜಿಯವರ ಪರವಾದ ಪ್ರಚಾರ, ಆಂದೋಲನ ನಡೆಸಿ, ಪ್ರಾಂತೀಯ ಕಾಂಗ್ರೆಸ್ ಪಕ್ಷವನ್ನೇ ಇಬ್ಭಾಗವಾಗಿ ಮುರಿಯಲು ಮುಂದಾದರು. ಆ ಸಂದರ್ಭದಲ್ಲಿ, ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯವರು, ತಮ್ಮ ಮಂಡಲದ ಸದಸ್ಯರಲ್ಲೊಬ್ಬರಾದ ಎಸ್॥ ಅಸಾಫ್ ಅಲಿಯವರನ್ನು ವಿಚಾರಣೆ ನಡೆಸುವ ಬಗ್ಗೆ ಮದ್ರಾಸಿಗೆ ಕಳುಹಿಸಿದರು. ಅವರು ಬಂದರು, ವಿಚಾರಿಸಿದರು, ಹಿಂತೆರಳಿದರು; ಆದರೆ ಇಲ್ಲಿಯ ಎವಾದ ಕೊನೆಗೊಳ್ಳಲಿಲ್ಲ. ಕೊನೆಗೆ ಕಾಂಗ್ರೆಸ್ ಪಕ್ಷದ ನ್ಯಾಯಎಧಾಯಕರ ಸಭೆ ಸೇರಿ, ಒಬ್ಬ ನಾಯಕರನ್ನು ಆರಿಸಬೇಕೆಂಬ ನಿರ್ಧಾರವಾಯಿತು. ಸದಸ್ಯರೆಲ್ಲರೂ ಮದ್ರಾಸಿಗೆ ಹೋದರು. ಬಂತಾಗ ಕಾಂಗ್ರೆಸ್ ಅಧ್ಯಕ್ಷರ ನಿರೂಪ! ಆಂಧ್ರ, ತಮಿಳು ನಾಡು ಮತ್ತು (ಒಂದೇ ಜಿಲ್ಲೆಯ) ಕೇರಳ—(ಬಳ್ಳಾರಿ, ದ. ಕನ್ನಡ ನೀಲಗಿರಿ ಮೊದಲಾದ ಜಿಲ್ಲೆಗಳಿದ್ದರೂ) ಕರ್ನಾಟಕದ ಸುದ್ದಿಯಿಲ್ಲ—ಏಕೆಂದರೆ ಇಲ್ಲಿ ಮದ್ರಾಸಿನಲ್ಲಿ ಅಂಥ ಧುರೀಣರಿಲ್ಲವೆಂದೋ ಪ್ರಾಂತವಿಲ್ಲವೆಂದೋ ರಾಷ್ಟ್ರಪತಿಗಳ ಅಭಿಪ್ರಾಯವಾಗಿರಬೇಕು)—ಈ ಮೂರು ಪ್ರಾಂತಗಳ ಕಾಂಗ್ರೆಸ್ ಅಧ್ಯಕ್ಷರುಗಳನ್ನು ದೆಹಲಿಗೆ ಬರುವಂತೆ ಅದರಲ್ಲಿ ಸೂಚಿಸಲ್ಪಟ್ಟಿತು. ಆದ್ದರಿಂದ ಕರೆದ ಸಭೆಯು ಆಗಲೇ ಮದ್ರಾಸಿನಲ್ಲಿ ನಡೆಯಲಿಲ್ಲ. ಸದಸ್ಯರು ಹೋದಂತೆ ಹಿಂದೆ ಬಂದರು.

ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರೂ ದಕ್ಷಿಣದಿಂದ ಹೋಗಿದ್ದ ಈ ಶ್ರಿಮೂರ್ತಿಗಳೂ ಸಂಭಾಷಣೆ ನಡೆಸಿದರು. ಒಮ್ಮತದ ನಿರ್ಧಾರವು ಆಗಲಿಲ್ಲ. ಕೊನೆಗೆ ಅಧ್ಯಕ್ಷರು ಒಂದು "ಸೂಚನೆ"ಯನ್ನು ಕೊಟ್ಟರು. ಆ ಸೂಚನೆಯು ಬಂದುದು ಮಹಾತ್ಮರ ಅಭಿಪ್ರಾಯದ ಮೇರೆಗೆ. ಕಾಂಗ್ರೆಸಿನ ದಿನನಿತ್ಯದ ಚಟುವಟಿಕೆಗಳಿಂದ ದೂರವಾಗಿರುವ ಮಹಾತ್ಮರು ಈ ವಿಷಯದಲ್ಲಿ ಮಾತ್ರ ಏತಕ್ಕೆ "ಸೂಚನೆ" ಕೊಡ ಹೇಳಿದರೋ ದೇವರೇ ಬಲ್ಲ. ಆದರೆ ಅವರು ಹೇಳಿದರು; ರಾಷ್ಟ್ರಪತಿಗಳು ಕೊಟ್ಟರು. ಬಳಿಕ ಕಳೆದ ತಾ. ೧೫ರಲ್ಲಿ ಮದ್ರಾಸ್ ನ್ಯಾಯ ಎಧಾಯಕರ ಸಭೆ ಸೇರಿತು. ಅದರ ಮುಂದೆ ರಾಷ್ಟ್ರಪತಿಗಳ "ಸೂಚನೆ"ಯ ವಾಚಕ ವಾಯಿತು. ಆದರೆ ನ್ಯಾಯ ಎಧಾಯಕರು, ತಮ್ಮ ನಾಯಕರನ್ನು ಆರಿಸುವ ತಮ್ಮ ಸ್ವಾತಂತ್ರ್ಯವನ್ನು ಬಿಟ್ಟುಬಿಡಲು ಸಿದ್ಧರಾಗಿರಲಿಲ್ಲ. ರಾಜಾಜಿಯವರನ್ನು ನಾಯಕ ಪದವಿಗೇರಿಸಬೇಕೆಂದು ಸೂಚಿಸಿದ್ದ ರಾಷ್ಟ್ರಪತಿಗಳ ಸೂಚನೆಗೆ ನ್ಯಾಯ ಎಧಾಯಕರಲ್ಲಿ ಹೆಚ್ಚಿನವರು ಸಮ್ಮತಿಸಲಿಲ್ಲ. ರಾಜಾಜಿಯವರ ಅನುಯಾಯಿಗಳು—ರಾಜಾಜಿಯವರು ಪ್ರಧಾನರಾಗದಿದ್ದರೆ, ಆಕಾಶವೇ ಕಳಚಿ ಬೀಳುವುದೆಂದು, ಪ್ರಸಂಗವೇ ಮುಳುಗಿ ಹೋಗುವುದೆಂದು ಹೇಳುವವರು—ರಾಷ್ಟ್ರಪತಿಗಳ ಸೂಚನೆಯಂತೆಯೇ ನಡೆಯಬೇಕೆಂದರು. ಆದರೆ ಹೆಚ್ಚಿನವರು ಅದಕ್ಕೊಪ್ಪಲಿಲ್ಲ ಮತ ತೆಗೆಯಲಾಗಿ ರಾಜಾಜಿಯವರ ಪಕ್ಷಪಾತಿಗಳ ಸಂಖ್ಯೆಯು ಬಹಳ ಅಲ್ಪವಾಗಿದ್ದುದ್ದು ಗೊತ್ತಾಯಿತು. ಆಗ ಹೋಯಿತು ರಾಷ್ಟ್ರಪತಿಗಳಿಗೆ ತಂತಿ. ಅವರು "ಲೀಡರನ್ನು" ಆರಿಸುವ ಕಾರ್ಯಕ್ಕೆ ಪುನಃ ಅಡ್ಡ ಮಾತಾಡಿದರು. "ಲೀಡರ್" ಸ್ಥಾನಕ್ಕೆ ಒಬ್ಬರಿಗಿಂತ ಅಧಿಕ ಹೆಸರುಗಳನ್ನೂ ಸೂಚಿಸಿ ತಮಗೆ ಕಳುಹಿಸಬೇಕೆಂದರು. ಅದಕ್ಕೂ ನ್ಯಾಯ ಎಧಾಯಕರು ಸಿದ್ಧರಿರಲಿಲ್ಲ. ಹೀಗೆ ಒಂದೆರಡು ದಿನಗಳು ಕಳೆದುವು. ಕೊನೆಗೆ ರಾಷ್ಟ್ರಪತಿಗಳಿಗೆ ವಸ್ತುಸ್ಥಿತಿಯು ಗೊತ್ತಾಯಿತು. ತಮ್ಮ ಸೂಚನೆ, ಶಿಫಾರಸುಗಳನ್ನೆಲ್ಲ ಅವರು ಹಿಂತೆಗೆದರು. ಮದ್ರಾಸಿನಲ್ಲಿ "ಲೀಡರ"ರ ಚುನಾವಣೆ ನಡೆದು ಶ್ರೀ. ಟಿ. ಪ್ರಕಾಶಂ ಅವರು, ಅತ್ಯಧಿಕ ಬಹುಮತದಿಂದ ನಾಯಕರಾಗಿ ಚುನಾಯಿಸಲ್ಪಟ್ಟರು. ಶ್ರೀ. ಪ್ರಕಾಶಂ ಅವರು ಈಗ ಪ್ರಕಾಶಕ್ಕೆ ಬಂದಿದ್ದಾರೆ. ಪ್ರಾಂತದ ನಲುವತ್ತು ಎಲೆಯ ಜನರ ಹಿತಸಾಧನೆಯ ಸೂತ್ರವನ್ನು ಅವರ ಕೈಗೆ ಜನತಾ ಪ್ರತಿನಿಧಿಗಳು ಕೊಟ್ಟಿದ್ದಾರೆ. ಶ್ರೀ ಪ್ರಕಾಶಂ ಅವರಿಗೆ ಈ ಪದವಿ ಬಂದುದಕ್ಕಾಗಿ ಅವರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವಲ್ಲದೆ ಅವರ ಪ್ರಯತ್ನದ ಫಲವಾಗಿ ಪ್ರಾಂತದ ಜನರ ಉದ್ಧಾರವಾಗಲೆಂದೂ ಬಯಸುತ್ತೇವೆ.

ಈಗ ಆದುದೆಲ್ಲ ಆಗಬೇಕಾದಂತೆಯೇ ಆಯಿತು. ಆದರೆ ಕಾಂಗ್ರೆಸ್ ಕಾರ್ಯಕಾರಿಗಳು ಈ ವಿಚಿತ್ರ ಧೋರಣೆಯನ್ನು ಏಕೆ ಕೈಕೊಂಡರೆಂಬ ವಿಚಾರವು ತಿಳಿಯದಾಗಿದೆ. ರಾಜಾಜಿಯವರು ಬುದ್ಧಿವಂತರೆಂಬುದೇನೋ ದಕ್ಷತೆಯಿಂದ ಕಾರ್ಯಾಚರಣೆ ಮಾಡಲು ಸಮರ್ಥರೆಂಬುದೇನೋ ನಿಜ, ಆದರೆ ಅದೇ ಗುಣ ರಾಜಾಜಿಯವರಲ್ಲಿ ಮಾತ್ರ ಇದೆ—ಮದ್ರಾಸಿನ ಕಾಂಗ್ರೆಸ್ ಪಕ್ಷದ ನ್ಯಾಯಎಧಾಯಕರ ಬೇರೆ ಯಾರಲ್ಲಿಯೂ ಇಲ್ಲವೆಂಬ ಭಾವನೆಯನ್ನು ಕಲ್ಪಿಸಿ ಕೊಂಡುದು ಸರಿಯಲ್ಲ. ರಾಜಾಜಿಯವರನ್ನು ಒಂದು ದೊಡ್ಡ ಸ್ಥಾನಕ್ಕೆ ತರಬೇಕೆಂದಿದ್ದರೆ ಅದಕ್ಕೆ—ಬೇರೆ ಉಪಾಯವಿತ್ತು. ಒಂದುಪ್ರಾಂತದ ನ್ಯಾಯಎಧಾಯಕ ಸಭಾಸದಸ್ಯರಿಗಿದ್ದ ಕಾಂಗ್ರೆಸ್ ಕಾರ್ಯಕಾರಿಗಳೇ ಸಮ್ಮತಿಸಿ ಕೊಟ್ಟಿದ್ದ ಅಧಿಕಾರವನ್ನು ಈಗ, ಒಬ್ಬ ವ್ಯಕ್ತಿಯ ಬಗ್ಗೆ, ಕಿತ್ತುಕೊಳ್ಳುವುದೆಂದರೆ ಅದು ಎಂದಿಗೂ ನ್ಯಾಯವಾಗಲಾರದು. ಕಾರ್ಯಕಾರಿಗಳೂ ರಾಷ್ಟ್ರಪತಿಗಳೂ ಇದನ್ನು ಅಲಕ್ಷಿಸಿದುದು ವ್ಯಸನಾಸ್ಪದ. ಇಷ್ಟು ತಡವಾಗಿಯಾದರೂ ಅವರು ತಮ್ಮ ತಪ್ಪನ್ನು ತಿದ್ದಿಕೊಂಡದ್ದು ಸಂತೋಷದ ಸುದ್ದಿ. ಈಗ ಕಾರ್ಯಕಾರಿಗಳು, ಮದ್ರಾಸಿನ ಕಾಂಗ್ರೆಸ್ ಪಕ್ಷದವರಿಗೆ ನಿರಾತಂಕವಾಗಿ ತಮ್ಮ ನಾಯಕರನ್ನು ಆರಿಸುವ ಅಧಿಕಾರವನ್ನು ಒಪ್ಪಿಕೊಂಡುದರಿಂದ, ಮದ್ರಾಸ್ ಆಧಿಪತ್ಯದ ಪ್ರಜಾಪ್ರಭುತ್ವ ತತ್ವದ ಪಾಲನೆಯಾದಂತಾಯಿತು. ಇದಕ್ಕಾಗಿ ನಾವು ಸಂತೋಷಪಡುತ್ತೇವೆ.

ಪ್ರಕೃತ ಶ್ರೀ. ಟಿ. ಪ್ರಕಾಶಂ ಅವರನ್ನು ಮದ್ರಾಸ್ ಕಾಂಗ್ರೆಸ್ ಪಕ್ಷದ ನ್ಯಾಯ ಎಧಾಯಕ ಸಭಾ ಸದಸ್ಯರು ತಮ್ಮ ನಾಯಕರನ್ನಾಗಿ ಆರಿಸಿದ್ದಾರೆ. ಇಷ್ಟರ ತನಕ ಇದ್ದ ಪಕ್ಷಭೇದ, ವ್ಯಕ್ತಿವೈಷಮ್ಯ—ಇವನ್ನೆಲ್ಲಾ ತೊರೆದು ಸಕಲರೂ ಶ್ರೀ ಪ್ರಕಾಶಂ ಅವರಿಗೆ ಬೆಂಬಲಕೊಟ್ಟು ಸಹಕರಿಸಿ ನಮ್ಮ ಆಧಿಪತ್ಯದಲ್ಲಿ ರಾಮರಾಜ್ಯ ಸ್ಥಾಪನೆಯಾಗುವಂತೆ ಮಾಡಬೇಕೆಂದು ನನ್ನಾಶೆ. ಹಿಂದೆ ಕಾಂಗ್ರೆಸ್ ಪಕ್ಷದ ಮಂತ್ರಿಮಂಡಲದವರು ಅಧಿಕಾರಕ್ಕೆ ಬಂದಾಗ ಜನೋಪಯುಕ್ತ ಕಾರ್ಯಗಳನ್ನು ಕೈಗೊಳ್ಳದೆ ಘನ ಉದ್ದೇಶಗಳಿಗಾಗಿ ಯತ್ನಿಸಿದರು. ಅದರಿಂದ ಈ ಕಂದಾಯಗಳ ಬಾಧೆಯಿಂದ ನರಳುತ್ತಿದ್ದವರಿಗೆ ಅವುಗಳ ಭಾರವು ಮತ್ತಷ್ಟು ಹೇರಲ್ಪಟ್ಟವು. ಈಗಿನ ಕಾಂಗ್ರೆಸ್ ಮಂತ್ರಿಮಂಡಲದವರು ಜನರ ಮೇಲಿನ ಕರಕಂದಾಯಗಳ ಭಾರ

ಕೀರ್ತಿಶೇಷ

ಶ್ರೀನಿವಾಸ ಶಾಸ್ತ್ರಿಗಳು.

X ಅನುಪಮ ರಾಜಕಾರಣ ಪಟು—ವಾಗ್ಮಿ.
X ಹಿಂದೀ ವಸಾಹತುಗಾರರಿಗೆ ಅತುಲ ಸೇವೆ ಸಲಿಸಿದರು.
X ಗಾಂಧಿಜಿಯವರ ನೆಚ್ಚಿನ ಮಿತ್ರ.

ನಾಮದಾರ ಎ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಕೆಲ ಸಮಯದ ಅಸ್ವಸ್ಥದಿಂದಾಗಿ ತನ್ನ ೭೭ನೇ ವಯಸ್ಸಿನಲ್ಲಿ ಕಳೆದ ತಾ. ೧೭ರಲ್ಲಿ ತನ್ನ ಮದ್ರಾಸಿನ ಮನೆಯಲ್ಲಿ ದೈವಾಧೀನರಾದರು.

ಅವರು ೧೮೬೯ನೇ ಇಸವಿ ಸಪ್ಟಂಬರ ತಾ. ೨೨ರಲ್ಲಿ ವಾಲಂಗಿಮಾನದಲ್ಲಿ ಜನ್ಮ ತಾಳಿದರು. ಸ್ಥಳೀಯ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ, ಕುಂಭಕೋಣದ ಗವರ್ನಮೆಂಟ್ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಉನ್ನತ ಸ್ಥಾನವನ್ನು ಗಳಿಸಿದರು.

ಮೊತ್ತಮೊದಲು ಶಾಸ್ತ್ರಿಗಳು ಶಾಲಾ ಮಾಸ್ಟರರಾಗಿ ಕೆಲಸ ಮಾಡಿದರು. ಅನಂತರ ಟ್ರಿಪ್ಲಿಕೇನಿನ ಹಿಂದೂ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಕ ಪಟ್ಟರು. ಮದ್ರಾಸಿನಲ್ಲಿ ಇರುವಾಗ ಅವರು ಟ್ರಿಪ್ಲಿಕೇನ್ ಲಿಟರರಿ ಸಹಕಾರ ಸಂಘ ಮತ್ತು ಮದ್ರಾಸು ಶಿಕ್ಷಣ ಸಂಘವನ್ನು ಸ್ಥಾಪಿಸಿದರು ತನ್ನ ಮುಖ್ಯೋಪಾಧ್ಯಾಯ ವೃತ್ತಿಯನ್ನು ಬಿಟ್ಟು, ೧೯೦೭ರಲ್ಲಿ ಅವರು ಗೋಪಾಲಕೃಷ್ಣ ಗೋಖಲೆಯವರ ಭಾರತ ಸೇವಾ ಸಮಾಜವನ್ನು ಸೇರಿದರು. ಗೋಖಲೆಯವರ ಅವಸಾನದ ಬಳಿಕ ಶಾಸ್ತ್ರಿಗಳು ಆ ಸಮಾಜದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

೧೯೧೩ರಲ್ಲಿ ಲಾರ್ಡ್ ಪೆಂಟಲೇಂಡರು ಅವರನ್ನು ಮದ್ರಾಸು ಶಾಸನ ಸಭೆಗೆ ಸದಸ್ಯರಾಗಿ ನೇಮಿಸಿದರು. ಅಂದಿನಿಂದ ಮಾನ್ಯ ಶಾಸ್ತ್ರಿಗಳ ರಾಜಕೀಯ ಚಟುವಟಿಕೆಗಳು ಮೊದಲಾದುವು. ೧೯೧೬ರಲ್ಲಿ ಅವರು ವರಿಷ್ಠ ಸಾಮ್ರಾಜಿಕ ಶಾಸನ ಸಭೆಯ ಸದಸ್ಯರಾದರು. ೧೯೨೦ರಲ್ಲಿ ಹೊಸ ಸುಧಾರಣಾ ಯೋಜನೆಯ ಮೇಲೆ ಘನ ಹೊಂದಿದ ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರರಾದರು. ಮಾಂಟೆಗೋ ಅವರೊಡನೆ ಭಾರತದಲ್ಲಿ ಸಂಚರಿಸಿ, ಅವರ ವಿಚಾರಣಾ ಸಮಿತಿಯಲ್ಲಿ ಕೆಲಸ ಮಾಡಿದರು. ಮತ್ತು ರೈಲ್ವೇ ಸುಧಾರಣೆಯ ಬಗ್ಗೆ ನೇಮಕಪಟ್ಟ ಏಕ ವರ್ತ್ ಸಮಿತಿಯಲ್ಲಿಯೂ ಕೂಡ ಕೆಲಸ ಮಾಡಿದರು

೧೯೧೯ರಲ್ಲಿ ಮಾನ್ಯ ಶಾಸ್ತ್ರಿಗಳು ಮಿತಗಾಮಿ ಪ್ರಾತಿನಿಧಿಕ ಸಮಿತಿಯ ಸದಸ್ಯರಾಗಿಯೂ, ಪುನಃ ೧೯೨೧ರಲ್ಲಿ ಸಾಮ್ರಾಜಿಕ ಸಮ್ಮೇಳನಕ್ಕೆ ಹಿಂದೀ ಪ್ರತಿನಿಧಿಯಾಗಿಯೂ ಇಂಗ್ಲಂಡನ್ನು ಸಂದರ್ಶಿಸಿದರು. ದಕ್ಷಿಣ ಆಫ್ರಿಕದ ಮಂತ್ರಿಗಳಾದ ಜನರಲ್ ಸ್ಮಟ್ಸ್ ಅವರೊಡನೆ ಈ ಸಮ್ಮೇಳನದಲ್ಲಿ ಮಾತುಕತೆ ಬೆಳೆಸಿದಾಗ ಬ್ರಿಟಿಷ್ ವಸಾಹತು ಪ್ರದೇಶಗಳ ಹಿಂದೀ ವಸಾಹತುಗಾರರ ಸಮಸ್ಯೆಗಳ ಕಡೆಗೆ ಮಾನ್ಯ ಶಾಸ್ತ್ರಿಗಳ ಗಮನವು ಸೆಳೆಯಲ್ಪಟ್ಟಿತು. ಈ ಹಿಂದೀಯರ ಸಮಾನ ನಾಗರಿಕ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಹೋರಾಟವನ್ನು ಮಾನ್ಯ ಶಾಸ್ತ್ರಿಗಳು ಮುಂದೆ ತನ್ನ ರಾಜಕೀಯ ರಂಗದಲ್ಲಿ ಪ್ರಧಾನ ಕಾರ್ಯ ಭಾಗವನ್ನಾಗಿ ಮಾಡಿಕೊಂಡರು.

ಇಂಗ್ಲೆಂಡನ್ನು ಸಂದರ್ಶಿಸಿದ ಕಾಲದಲ್ಲಿ ಅವರಿಗೆ ಲಂಡನ್ ನಗರದ ಹೊಕ್ಕು ಬಳಕೆಯ ಹಕ್ಕನ್ನು ಕೊಡಲಾಯಿತು ಸಾಮ್ರಾಜಿಕ ಸಮ್ಮೇಳನವು ಕೊನೆಗೊಂಡ ಕೂಡಲೇ ಅನೇಕ ವಸಾಹತು ರಾಜ್ಯಗಳನ್ನು ಸಂದರ್ಶಿಸಿ ಅಲ್ಲಿಯ ಹಿಂದೀಯರ ಮತ್ತು ಭಾರತದ ಒಳಗಿನ ಸಮಸ್ಯೆಗಳ ಮುಖ್ಯತಃ ಹಿಂದೀ ವಸಾಹತುಗಾರರ ಮೇಲೆ ಹೊರಿಸಲ್ಪಟ್ಟ ಕಾಯಿದೆ ನಿರ್ಬಂಧನೆಗಳ ಬಗ್ಗೆ ವಿಚಾರ ವಿನಿಮಯ ನಡೆಸುವ ಕಾರ್ಯಕ್ಕಾಗಿ ಒಬ್ಬ ಹಿಂದೀ ಪ್ರತಿನಿಧಿಯನ್ನು ಕಳಿಸಬೇಕೆಂಬ ಉದ್ದೇಶಕ್ಕೆ ಅನುಸಾರವಾಗಿ ಭಾರತ ಸರಕಾರವು ಮಾನ್ಯ ಶಾಸ್ತ್ರಿಗಳನ್ನು ಆ ಹುದ್ದೆಗೆ ನೇಮಿಸಿತು. ಆಸ್ಟ್ರೇಲಿಯ ನ್ಯೂಜಿಲೇಂಡ್ ಮತ್ತು ಕೆನಡಾವನ್ನು ಅವರು ಸಂದರ್ಶಿಸಿದರು ಆದರೆ ದಕ್ಷಿಣ ಆಫ್ರಿಕವನ್ನೇ ಸಂದರ್ಶಿಸಲು ಅವರಿಗೆ ಆ ಪ್ರಸಂಗದಲ್ಲಿ ಅಲ್ಲಿಯ ಸರಕಾರವು ನಿರಾಕರಿಸಿತು.

ಇವರು ೧೯೨೧ರಲ್ಲಿ ರಾಷ್ಟ್ರಸಂಘದ ಸಭೆಗೆ ಭಾರತ ಪ್ರತಿನಿಧಿಯಾಗಿ ಹಾಜರಿದ್ದರು ೧೯೨೨ರಲ್ಲಿ ವಾಶಿಂಗ್‌ಟನ್ನಿನಲ್ಲಿ ಜರಗಿದ ಜಾಗತಿಕ ನಿಶ್ಶಸ್ತ್ರೀಕರಣ ಅಥವಾ ಶಸ್ತ್ರಸನ್ನಾಹ ಅಧಿವೇಶನದಲ್ಲಿ ನೆರೆದ ಅನೇಕ ಜಗತ್ಪ್ರಸಿದ್ಧರಾದ ರಾಜಕಾರಣ ಪಟುಗಳ ಮೇಲೆ ತನ್ನ ಉಜ್ವಲ ವಾಕ್ಚಾತುರ್ಯದ ಪ್ರಭಾವವನ್ನು ಬೀರಿದರು. ೧೯೨೪ರಲ್ಲಿ ಕೂಲಿಕಾರ ರಾಜ ನಿಯೋಗದ ಸದಸ್ಯರಿದ್ದರು.

೧೯೨೫ರಲ್ಲಿ ಕೆನಿಯಾದಲ್ಲಿ ಹಿಂದೀಯರ ನೆಲೆಯು ನಿರಾಶಾಜನಕವಾಗಿ ಮಾರ್ಪಟ್ಟಿತು ಅವರ ದುಃಖಸಂಕಷ್ಟಗಳನ್ನು ಇಂಗ್ಲೆಂಡಿಗೆ ಹೋಗಿ ನಿವೇದಿಸಿಕೊಳ್ಳುವುದಕ್ಕಾಗಿ ಒಂದು ಶಿಷ್ಟ ಮಂಡಲವನ್ನು ಹಿಂದೀ ಶಾಸನ ಮಂಡಲಿಯ ಅನಧಿಕೃತ ಸದಸ್ಯರು ಆಗ ನೇಮಿಸಿದರು; ಅದರ ಅಧ್ಯಕ್ಷರಾಗಿ ಮಾನ್ಯ ಶಾಸ್ತ್ರಿಗಳು ಇಂಗ್ಲೆಂಡಿಗೆ ತೆರಳಿದರು. ಅಲ್ಲಿ ಲಾರ್ಡ್ ಡಿಲಿಮೊರಿಯವರು ಮಾನ್ಯ ಶಾಸ್ತ್ರಿಗಳ ಪ್ರತಿವಾದಿಯಾಗಿ ಇದ್ದರು. ಲಂಡನ್ ಸಮಾಜದ ವರ ಮೇಲೆ ಲೋರ್ಡ್ ಡಿಲಿಮೊರಿಯವರು ತನ್ನ ವರ್ಚಸ್ಸನ್ನು ಧಾರಾಳವಾಗಿ ಪ್ರಯೋಗಿಸಿದುದರಿಂದ, ಹಿಂದೀಯರಿಗೆ ಇಲ್ಲವೆಂದು ನಿಷೇಧಿಸಲ್ಪಟ್ಟ ಆ ಪೂರ್ಣ ಪೌರ ಸಮಾಜಿಕವಾದ ಮತ್ತು ವರ್ಣ ಸಮಾನತೆಯ ಹಕ್ಕನ್ನು ಸಮರ್ಥಿಸಿ, ವಸಾಹತು ಕಾರ್ಯಾಲಯದ ಮುಂದಿಡುವುದಕ್ಕೆ ಮಾನ್ಯ ಶಾಸ್ತ್ರಿಗಳಿಗೆ ಸಾಕೋ ಸಾಕಾಯಿತು. ಅತ್ಯಂತ ಕಷ್ಟವಾಯಿತು. "ಕೆನಿಯಾದಲ್ಲಿ ಹಿಂದೀಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಕಳಕೊಂಡರೆ ಇತರ ವಸಾಹತುಗಳಲ್ಲಿಯ ಹಿಂದೀಯರು ಕೂಡ ತಮ್ಮ ಹಕ್ಕುಬಾಧ್ಯತೆಗಳನ್ನು ಕಳಕೊಳ್ಳುವರು" ಎಂಬುದಾಗಿ ಮಾನ್ಯ ಶಾಸ್ತ್ರಿಗಳು ಭಾರತಕ್ಕೆ ತಂತಿಯನ್ನು ಕಳಿಸಿದರು. ತನ್ನ ತೀವ್ರ ಅನಾರೋಗ್ಯದ ದೆಸೆಯಲ್ಲಿಯೂ ಕೂಡ, ಅವರು ಹಿಂದೀಯರ ಹಕ್ಕುಬಾಧ್ಯತೆಗಳ ಸಲುವಾಗಿ ಅವಿಶ್ರಾಂತವಾಗಿ ದುಡಿದರು.

ಅವರು ಭಾರತಕ್ಕೆ ಹಿಂತಿರುಗಿದಾಗ ಅವರ ಆರೋಗ್ಯವು ಪೂರ್ಣ ಕೆಟ್ಟಿತ್ತು ಮತ್ತು ಅವರು ಗುಣ ಹೊಂದಲು ಒಂದು ವರ್ಷ ಹಿಡಿಯಿತು.

ಶಾಸನ ಮಂಡಲದಲ್ಲಿ ನಿಂತು, ಇತರ ೧೮ ಸದಸ್ಯರೊಂದಿಗೆ ರಾಜ ಶಾಸನಾ ಸುಧಾರಣೆಗಳ ಯಾದಿಯೊಂದನ್ನು ತಯಾರಿಸುವ ಸಂದರ್ಭದಲ್ಲಿ ಅವರು ನಡೆಸಿದ ಕಾರ್ಯಭಾರವು ಗಮನಾರ್ಹವಾದೆ. ಹಿಂದೀ ಶಾಸನಗಳಲ್ಲಿ ರೌಲೆಟ್ ಕಾನೂನಿನಿಂದ ತೀವ್ರ ವಾದವಿವಾದಗಳು ಉಂಟಾದಾಗ ಮಾನ್ಯ ಶಾಸ್ತ್ರಿಗಳು ಅದರ ಮೇಲೆ ಒಂದು ಉಗ್ರ ಆಕ್ರಮಣವನ್ನೇ ನಡೆಸಿ ಬಿಟ್ಟರು. ಹಿಂದುಸ್ತಾನದ ಬಗ್ಗೆ ಹೆಚ್ಚಿನ ರಾಜ್ಯಾಂಗ ಸುಧಾರಣೆಯನ್ನು ದೂರಕಿಸಿಕೊಳ್ಳಲಿಕ್ಕಾಗಿ ಬ್ರಿಟಿಷ್ ಅಧಿಕಾರಿಗಳನ್ನು ಒತ್ತಾಯಪಡಿಸುವ ಗುರಿ ಇಟ್ಟುಕೊಂಡು ೧೯೨೪ರಲ್ಲಿ ಅವರು ಭಾರತದ ರಾಷ್ಟ್ರೀಯ ಉದಾರವಾದೀ ಸಂಯುಕ್ತ ಘಟನಾ ಮಂಡಲಿಯ ಪರವಾಗಿ ಇಂಗ್ಲೆಂಡಿಗೆ ಹೋದರು ಲಂಡನಿನಲ್ಲಿ ಜರಗಿದ ಎರಡು ರೌಂಡ್ ಟೇಬ್ಲ ಪರಿಷತ್ತುಗಳಲ್ಲಿ ಮಾನ್ಯ ಶಾಸ್ತ್ರಿಗಳು ಭಾರತದ ಪ್ರತಿನಿಧಿಯಾಗಿ ಭಾಗ ವಹಿಸಿದರು. ಮತ್ತು ಅದರಲ್ಲಿ ಅವರು ಭಾರತದ ರಾಜ್ಯಾಂಗ

(೯ನೇ ಪುಟ ನೋಡಿ)

ವನ್ನು ಇಳಿಸಿ, ಜನರ ಆರ್ಥಿಕ ಸ್ಥಿತಿಯನ್ನು ಆಹಾರ ಅಭಾವದ ಎದ್ಯಮಾನಗಳನ್ನೂ ಸುಧಾರಿಸುವಂತೆ ಮಾಡಬೇಕಾಗಿದೆ. ಈ ಕಾರ್ಯಗಳನ್ನು ಕೈಕೊಂಡಲ್ಲಿ ಆಧಿಪತ್ಯದ ನಲ್ನುನತ್ತು ಎಲಿಯ ಜನರೂ ಶ್ರೀ ಪ್ರಕಾಶರವರಿಗೆ ಸಹಕಾರ ಕೊಡುವುದರಲ್ಲಿಯೂ ಅವರನ್ನು ಕೊಂಡಾಡುವದರಲ್ಲಿಯೂ ಸಂಶಯವಿಲ್ಲ.

——

ರಮಣೀಯ ಅಂಗಕಾಂತಿಯನ್ನು ಏಕೆ ಪಡೆಯಬಾರದು

ಕ್ರಮವಾಗಿ ಪ್ರತಿ ರಾತ್ರಿಯೂ ಎರಡು ಬೈಲ್ ಬೀನ್ಸ್‌ಗಳನ್ನು ಸೇವಿಸುವ ಅಮೂಲ್ಯ ಸೂತ್ರವನ್ನು ಅನುಸರಿಸಿದ್ದಲ್ಲಿ ದೇಹದೊಳಗಿನ ಆರೋಗ್ಯದ ಚಿಹ್ನೆಯಾಗಿ ಹೊರಗೆ ಕಾಣಿಸುವ ಸ್ವಚ್ಛ, ನಿಷ್ಕಳಂಕ ಚರ್ಮ ಕಾಂತಿಯನ್ನು ಪಡೆಯಬಹುದು.

ಬೈಲ್ ಬೀನ್ಸ್‌ಗಳು ಪ್ರತಿ ದಿನವೂ ರಕ್ತವಾಹಿನಿಯಲ್ಲಿರುವ ಮಲಪದಾರ್ಥವನ್ನು ಹೊರಗೆ ಡಹುವುವು; ಹಾಗೆ ಶುದ್ಧಗೊಂಡ ರಕ್ತವು ಅಂಗಾಂಗಗಳ ಅಣುರಚನೆಗಳನ್ನು ಪೋಷಿಸಿ ಕಳೆ ಕಳಂಕಗಳನ್ನು ತೆಗೆದೊಯ್ಯುವುವು. ಅದುಕಾರಣ, ನಿಮಗೆ ಸ್ವಚ್ಛ ಮನೋಹರ ಅಂಗ ಕಾಂತಿ ಬೇಕಿರುವಲ್ಲಿ ಈ ರಾತ್ರಿಯಿಂದಲೇ ಬೈಲ್ ಬೀನ್ಸ್ ಸೇವಿಸಲು ಆರಂಭಿಸಿರಿ.

ಪ್ರತಿದಿನವೂ 1,000,000ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತವೆ.

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸ್‌ಗಳನ್ನು ಸ್ಟಾಕ್ ಮಾಡುತ್ತಾರೆ.
ಏಜಂಟರು:—ಮೆಸ್ಸರ್ಸ್ ದಾಧಾ ಎಂಡ್ ಕೊ., ಪಿ. ಟಿ. ಮದ್ರಾಸು.

ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ವನಸ್ಪತಿ ಸಾರಗಳಿಂದ ತಯಾರಿಸಿದ್ದಾಗಿವೆ; ಆದುಕಾರಣ ಪೂರ್ಣ ನಂಬಿಕೆಯಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಅಂಗರಚನೆಯನ್ನು ಚೇತನಗೊಳಿಸಿ ರಕ್ತವನ್ನು ಶುದ್ಧ ಮಾಡಿ, ಪ್ರತಿ ದಿನವೂ ಮಲ ಪದಾರ್ಥವನ್ನು ಹೊರಗೆಡಹುವುವು; ಹಾಗೆ, ದೇಹದ ಅಂತಃ ಶುಚಿಯನ್ನು ಮನೋಹರ ಹಾಗೂ ಸ್ವಚ್ಛ ಅಂಗ ಕಾಂತಿಯನ್ನು ನಿಶ್ಚಿತಗೊಳಿಸುತ್ತವೆ.

BILE BEANS

ಬೈಲ್ ಬೀನ್ಸ್ ನಿಮ್ಮ ರಮಣೀಯತೆಯನ್ನು ಇಮ್ಮಡಿಗೊಳಿಸುತ್ತೆವೆ.

ಬ್ರಿಟಿಷ್ ಸಚಿವರ ದ್ವಿತೀಯ ಕಾರ್ಯಾವಳಿ ಪ್ರಾರಂಭ - ಮುಸ್ಲಿಮ್ ಲೀಗಿನ ಪಾಕಿಸ್ತಾನ - ಪಠಾಣರ ನಿಶ್ಚಲ ಭಕ್ತಿ - ಲೋಕಶಾಂತಿಯ ಆಶೆ.

ಹಿಂದೀ ಸ್ವಾತಂತ್ರ್ಯದ ಕುರಿತು ಕಾಂಗ್ರೆಸ್ ಲೀಗುಗಳಲ್ಲಿ, ಹಿಂದೂ ಮುಸ್ಲೀಮರಲ್ಲಿ, ವರ್ಣಾಶ್ರಮಿ ಪಂಚಮರಲ್ಲಿ ನರೇಂದ್ರ ಪ್ರಜಾಮುಖಂಡರಲ್ಲಿರುವ ಎಏಧ ಅಭಿಪ್ರಾಯ,ಆಶೆಗಳ ತಿಕ್ಕಾಟದಲ್ಲಿ ತಮ್ಮ ತಲೆಯನ್ನೊಡ್ಡಿ, ಬ್ರಿಟಿಷ್ ಸಚಿವ ತ್ರಯರು ಕಂಗೆಟ್ಟು, ಎಶ್ರಾಂತಿಯನ್ನರಸುತ್ತಾ ಕಾಶ್ಮೀರಿನ ಶೀತವಲಯಕ್ಕೆ ಹೋಗಿ ಅಲ್ಲಿ ಹಿಂದೀ-ಆಂಗ್ಲ ಭಾಗ್ಯವಿಧಾತನ ಸ್ಮರಣೆಯಲ್ಲಿ ಕೆಲವು ದಿನಗಳನ್ನು ಕಳೆದು, ಈಗ ಪುನಃ ಡಿಲ್ಲಿಗೆ ದಯಮಾಡಿರುವರು ಅಲ್ಲಿಯ ತಪ್ತ ವಾತಾವರಣವು ತಮ್ಮ ಕಾಶ್ಮೀರ ಪ್ರವಾಸವು ಮುಗಿಯುವಷ್ಟರಲ್ಲಿ ತಣ್ಣಗಾಗಬಹುದೆಂದು ನಿಜವಾಗಿಯೂ ಆ ಸಚಿವ ತ್ರಯರು ನಂಬಿದ್ದರೆ ಅವರ ಆ ಆಶೆಯು ನಿರರ್ಥಕವೆಂದು ಆಗ ಅವರಿಗೆ ತಿಳಿದು ಬಂದಿರಬಹುದು. ಹಿಂದುಸ್ಥಾನ ಏಭಜನದ ಧ್ಯೇಯವನ್ನು ಮಿ. ಜಿನ್ನಾ ಸಾಹೇಬರು ಎಷ್ಟು ಮಾತ್ರಕ್ಕೂ ಬಿಡುವಂತಿಲ್ಲ. ಲೀಗನ್ನು ಸಮಾಧಾನಗೊಳಿಸಲಿಕ್ಕಾಗಿ–ಲೀಗಿಗೆ ಸೇರದ ಉಳಿದ ಮೂವತ್ತು ಕೋಟಿ ಭಾರತೀಯರೆಲ್ಲರ ಮನಸ್ಸನ್ನು ನೋಯಿಸಿ, ಪಾಕಿಸ್ತಾನ ಸ್ಥಾಪನೆಯ ಕಾರ್ಯಕ್ಕೆ ತಾವು ಕೈಯೊಡ್ಡಬೇಕೊ-ಯಾ ಆ ಬಹು ಸಂಖ್ಯಾಕರಾದ ಹಿಂದೂ, ಕ್ರೈಸ್ತ ಮುಸ್ಲಿಂ ಪಾರ್ಸೀಯರ ಮತಾನುಸಾರವಾಗಿ ತಾವು ಹಿಂದೀ ಐಕ್ಯತೆಯನ್ನು ಪಾಲಿಸಿ ಮುಂದಿನ ರಾಜ್ಯಾಂಗ ರಚನೆಗೆ ಸಹಾಯಕರಾಗಬೇಕೋ ಎಂಬ ಪ್ರಶ್ನೆಯು ಇನ್ನೂ ಸಚಿವ ತ್ರಯರನ್ನು ಬಾಧಿಸುತ್ತಿದೆ.

ಪಾಕಿಸ್ತಾನವೆಂದರೇಗ ಹಿಂದೂ ಜನತೆಗೆ ಎಷ್ಟರ ಭೀತಿ ಇರಬಹುದೆಂದು ನಾವು ಭೋಪಾಲದ ವಾರ್ತೆಯಿಂದ ತಿಳಿಯಬಹುದು. ನರೇಂದ್ರ ಮಂಡಲಾಧ್ಯಕ್ಷರಾದ ಭೋಪಾಲಿನ ನವಾಬರು ಹಿಂದೀ ಐಕ್ಯತೆಗೆ ತಮ್ಮ ನರೇಂದ್ರ ಮಂಡಲದ ಒಪ್ಪಿಗೆ ಇದ್ದರೂ ತಮ್ಮ ವೈಯಕ್ತಿಕ ಅಭಿಪ್ರಾಯದಲ್ಲಿ ಪಾಕಿಸ್ತಾನ ಸ್ಥಾಪನೆಯು ಅವಶ್ಯವೆಂದು ಕೆಲವು ದಿನಗಳ ಹಿಂದೆ ಸಾರಿದ್ದರು. ನವಾಬರ ಆ ಘೋಷಣೆ ಕೇಳಿ ಬರುತ್ತಲೇ ಭೋಪಾಲ ರಾಷ್ಟ್ರದಿಂದ ಹಿಂದುಗಳು ಹೊರ ಹೊರಡಲಾರಂಭಿಸಿದರು. ನವಾಬರು ಕೊನೆಗೆ ಜವಾಹರಲಾಲರನ್ನು ಭೋಪಾಲಿಗೆ ಆಮಂತ್ರಿಸಿ ತಮ್ಮ ಪ್ರಜೆಗಳಿಗೆಲ್ಲಾ ಒಕ್ಕಟ್ಟಿನ ಏಚಾರಗಳನ್ನೂ ಹಿಂದೀ ಉನ್ನತಿಯ ಧ್ಯೇಯವನ್ನೂ ಅವರ ಅಸದೃಶ ವಾಣಿಯಿಂದ ಬೋಧಿಸಬೇಕಾಯಿತು. ಪಾಕಿಸ್ತಾನದ ಸುಖವೇನೆಂದು ಲೀಗಿನ ಪ್ರಭಾವದ ಕ್ಷೇತ್ರವಾಗಿರುವ ಅಲಿಘರದಲ್ಲಿ ಮುಸ್ಲಿಮರಲ್ಲದ ಇತರರೆಲ್ಲಾ ಇತ್ತೀಚೆಗೆ ಅನುಭವಿಸಿ ನೋಡಿದರು ತಮ್ಮ ಸ್ವಂತ ಶ್ರೇಯಸ್ಸನ್ನು ಕೂಡ ಧಿಕ್ಕರಿಸಿ, ಮತಾಂಧತೆಯಿಂದ ಸಮೂಪರಿರುವ ಅನ್ಯ ಮತಾನುಯಾಯಿಗಳನ್ನು ಪೀಡಿಸುವುದೇ ಪಾಕಿಸ್ತಾನ ಹಾಡಿನ ರಾಗವೆಂದು ಸುಶಿಕ್ಷಿತ ಮುಸ್ಲಿಮ್ ವಿದ್ಯಾರ್ಥಿಗಳು ಅಲಿಘರದಲ್ಲಿ ಭೀಕರ ರೀತಿಯಿಂದ ಪ್ರದರ್ಶಿಸಿರುವರು.

ಈ ರೀತಿಯ ವೈಪರೀತ್ಯದ ಘಟನೆಗಳು ಇತ್ತ ಸಂಭವಿಸುತ್ತಿರುವಾಗ ಅತ್ತ ಪಠಾಣರ ನಾಡಿನಿಂದ ಹಿಂದೀ ಐಕ್ಯತೆಗೆ ಬಲವಾದ ಸಲಹೆಯು ದೊರಕುತ್ತಿದೆ. ಪಂದಾಸ್ತಿದ ಕೊಳಕಿನ ದುರ್ವಾಸನೆಯನ್ನು ಸುಗಂಧವೆಂದು ಸ್ವೀಕರಿಸಿ,–ಹಿಂದುಗಳೊಡನೆ ದ್ವೇಷವನ್ನು ಬೆಳೆಸುವುದೇ ಮುಸ್ಲಿಮರಿಗೆ ಶ್ರೇಯಸ್ಸಿನ ದಾರಿಯೆಂದು ಸಾರುತ್ತಿರುವ ಲೀಗಿನ ಪ್ರಕೃತ ನಾಯಕರ ಧೋರಣೆಯನ್ನು ಖಂಡಿಸಿ, ಗಡಿನಾಡಿನ ಗಾಂಧಿಯವರೆಂದು ಹೆಸರನ್ನು ಪಡೆದ ಪಠಾಣ ಧುರೀಣರಾದ ಖಾನ್ ಅಬ್ದುಲ್ ಘಫರ್ ಖಾನರು ಮೊನ್ನೆ ಹೊಸ ಡಿಲ್ಲಿಯಲ್ಲಿ ಮುಸ್ಲಿಂ ಯುವಕರಿಗೆಲ್ಲಾ ದೇಶ ಪ್ರೇಮ, ದೇಶ ಸೇವೆಯ ಧ್ಯೇಯಗಳನ್ನು ಪುನಃ ಬೋಧಿಸಿರುವರು. ಹಿಂದೀ ಐಕ್ಯತೆ, ಹಿಂದೀ ಉನ್ನತಿಯಿಂದ ಇಸ್ಲಾಮಿಗೆ ಗಂಡಾಂತರವಿದೆಯೆಂದು ನಿರಕ್ಷರ ಮುಸ್ಲಿಮ್ ಜನತೆಯಲ್ಲಿ ಭೀತಿ ಹುಟ್ಟಿಸಲೆತ್ನಿಸುವ ಲೀಗಿನ ಕಾರ್ಯ ಕಲಾಪಗಳಿಗೆ ಪಠಾಣ ನಾಡಿನಲ್ಲಿ ಬೆಂಬಲವೇನೂ ದೊರಕದೆಂಬುದು ಖಾನ್ ಅಬ್ದುಲ್ ಘಫರ ಖಾನರ–ಅಂತೆಯೇ ಗಡಿನಾಡಿನ ವರಿಷ್ಠ ಮಂತ್ರಿಯಾದ ಅವರ ಸಹಾನುಜಾತರ ಭಾಷಣಗಳಿಂದ ವ್ಯಕ್ತವಾಗುತ್ತದೆ.

ನಡುವೆ ಸಚಿವತ್ರಯರ ಅಂತರಂಗದ ಧೋರಣೆಗಳೇನಿರಬಹುದೆಂದು ಇನ್ನೂ ಕಂಡುಬರುವುದಿಲ್ಲ—ಹಿಂದೀಯರು ಆ ಸಚಿವರ ಕಾರ್ಯಭಾಗಗಳ ಮೇಲೆಯೇ ದೃಷ್ಟಿಯನ್ನಿಟ್ಟು, ತಮ್ಮ ಆಶೆಗಳನ್ನು ಬೆಳೆಸಿ, ಕೊನೆಗೆ ಮೋಸ ನಿರಾಶೆಗಳ ಗುಳಿಯಲ್ಲಿ ಬೀಳಬೇಕಾದೀತೆಂದು ಶ್ರೀಮತಿ ಕಮಲಾದೇವಿಯರೂ, ಶ್ರೀ ಜಯಪ್ರಕಾಶ ನಾರಾಯಣರೂ ಎಚ್ಚರಿಸುತ್ತಾರೆ. ಹೀಗೆ ಭಾರತದ ಭಾಗ್ಯವೇನಿದೆಯೆಂದು ಏಧಾತನಿಗೆ ಮಾತ್ರ ತಿಳಿದಿರುವುದಲ್ಲದೆ ಅಲ್ಲಿಯ ನಾಟಕದ ಕೊನೆಯಂಕವೇನಿದೆಯೆಂದು ಇನ್ನೂ ಹೇಳಲು ಸಾಧ್ಯವಿಲ್ಲ

ಲೋಕದ ಶಾಂತಿಯ ಸಮಸ್ಯೆಯೂ ಹಿಂದೀ ಸಮಸ್ಯೆಯಂತೆಯೇ ಇನ್ನೂ ಕಠಿಣವಾಗಿಯೇ ಉಳಿದಿದೆ. ಆಂಗ್ಲ ಅಮೇರಿಕಗಳಿಗೆ ರಶ್ಯದ ಮೇಲೆ ವಿಶ್ವಾಸವಿಲ್ಲ. ರಶ್ಯಕ್ಕೆ ಆಂಗ್ಲ ಅಮೇರಿಕಗಳಲ್ಲಿ ವಿಶ್ವಾಸವಿಲ್ಲ. ಯೂರೋಪಿನಲ್ಲಿ ಸೋತು ಶರಣಾಗತರಾದ ಹಂಗೇರಿ, ಇಟಲಿ, ಜರ್ಮನಿಗಳೊಡನೆ ವಿಜಯಿ ರಾಷ್ಟ್ರಗಳು ಒಟ್ಟಾಗಿ ಸಂಧಾನವನ್ನು ಬೆಳೆಸುವ ಆಶೆಯು ತೀರಾ ನಿರರ್ಥಕವೆಂದು ಈಗ ನಿಶ್ಚಯವಾಗಿಯದೆ. ಅವುಗಳೊಡನೆ ರಶ್ಯವು ಪ್ರತ್ಯೇಕ ಒಪ್ಪಂದ, ಆಂಗ್ಲ ಅಮೇರಿಕಗಳು ಪ್ರತ್ಯೇಕ ಒಪ್ಪಂದವನ್ನು ಬೆಳೆಸಿಯೇ ಶಾಂತಿಸ್ಥಾಪನೆಯಾಗಬೇಕಾಗಿದೆ. ಹಾಗೆ ಸ್ಥಾಪಿಸುವ ಶಾಂತಿಯು ಚಿರ ಕಾಲ ಬಾಳುವಂತಿಲ್ಲ; ಯುರೋಪಿನಲ್ಲಿ ಇನ್ನೊಂದು ಮಹಾಯುದ್ಧದ ಕಾರ್ಮೋಡಗಳು ಮೆಲ್ಲಮೆಲ್ಲನೆ ಒಟ್ಟಾಗುತ್ತಿವೆ.

ಆಗ್ನೇಯ ಏಷ್ಯದಲ್ಲಿ ಫ್ರೆಂಚರು ಆಂಗ್ಲರ ಸಹಾಯವನ್ನು ಬಿಟ್ಟು ಇಂಡೋ ಚೀನದೊಡನೆ ಒಪ್ಪಂದವನ್ನು ಮಾಡಿಕೊಂಡಿರುವುದರಿಂದ ಅಲ್ಲಿ ಸಮರಾಗ್ನಿಯು ತಣ್ಣಗಾದರೂ ಫ್ರೆಂಚರ ಮುಂದಿನ ಬಾಳು ಸುಖಕರವಾಗುವಂತಿಲ್ಲ ಸಮರ ಶಕ್ತಿಯನ್ನು ಬೆಳೆಸಿದ ಚೀನವು ಒಳಗಣ ಅಂತರ್ಯುದ್ಧವನ್ನು ನಿಲ್ಲಿಸಿ ತನ್ನ ಮುಂದಿನ ಶ್ರೇಯಸ್ಸಿನ ಕಡೆ ದೃಷ್ಟಿ ಇಡುತ್ತಲೇ ಫ್ರೆಂಚರನ್ನು ಇಂಡೋ ಚೀನದಿಂದ ಹೊರ ಹಾಕುವ ಕಾರ್ಯವನ್ನು ಪ್ರಾರಂಭಿಸದಿರದು. ಫ್ರೆಂಚರಿಗೆ ಸಾಮ್ರಾಜ್ಯದ ದುರ್ವಾಸನೆಯಿನ್ನೂ ತಟ್ಟಿಕೊಂಡಿದೆ; ಸಾಮ್ರಾಜ್ಯ ರಕ್ಷಣೆಗೆ ಬೇಕಾದ ಬಲವಿಲ್ಲ. ಇರಿಡೋನೇಸ್ಯದಲ್ಲಿ ಒಪ್ಪಂದದ ಮಾತುಗಳೆಲ್ಲಾ ನಿರರ್ಥಕವಾಗಿ, ಡಚ್ಚ–ಇಂಡೋನೇಸ್ಯ ಯುದ್ಧವು ಇನ್ನು ಬೇಗನೇ ಸಮಾಪ್ತಿ ಹೊಂದುವಂತಿಲ್ಲ. ಡಚ್ಚರಿಗೆ ಸ್ವಂತ ಸಮರ ಶಕ್ತಿಯು ಸಾಲದಿದ್ದರೂ ಆಂಗ್ಲ ಸಹಾಯವಿರುವುದರಿಂದ ಇಂಡೋನೇಸ್ಯದ ದೇಶೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಬಹು ಕಾಲವಿನ್ನೂ ನಾನಾ ರೀತಿಯಿಂದ ಹೋರಾಡುತ್ತಿರಬೇಕಾಗಬಹುದು

ಇರಾಣದಲ್ಲಿ ರಶ್ಯವು ತಕ್ಕಾಲ ತನ್ನ ಹೆಜ್ಜೆಯನ್ನು ಹಿಂತೆಗೆದರೂ ಆಂಗ್ಲ ಅಮೇರಿಕಗಳಿನ್ನೂ ಇರಾಣದಲ್ಲಿ ಸ್ವೇಚ್ಛಾಧಿಕಾರವನ್ನು ಪ್ರದರ್ಶಿಸ ಸಾಧವಾಗದಂತೆ ರಶ್ಯದ ಬೆಂಬಲವಿರುವ ಶ್ರಮಜೀವಿಗಳ ಪಕ್ಷವೊಂದು ಅಲ್ಲಿ ಪ್ರಬಲ ಸಾಧನೆಯಲ್ಲಿದೆ. ರಶ್ಯವು ಇನ್ನು ಮುಂದೆ ಇರಾಣದ ಕಲ್ಲೆಣ್ಣೆಯ ಆಂಗ್ಲ ಅಮೇರಿಕಗಳಷ್ಟೇ ಪ್ರಯೋಜನವಿನ್ನು ಹೊಂದಿ, ಅಜರ ಒಜಾನಿನಿಂದ ಉಳಿದ ಇರಾಣಿನಲ್ಲಿ ನಡೆಯುವ ವಿದ್ಯಮಾನಗಳನ್ನವಲೋಕಿಸುತಾ, ಹಿಂದುಸ್ತಾನದ ಕಡೆ ತನ್ನ ದೃಷ್ಟಿಯನ್ನು ತಪ್ಪಿಸದೆ ಆಂಗ್ಲ ರಶ್ಯಗಳಿಗೆ ನಿರಂತರ ಕಂಟಕ ರೂಪವಾಗುವಂತಿದೆ. ಮಧ್ಯ ಪ್ರಾಚ್ಯದಲ್ಲಿ ಆಂಗ್ಲರು ರಾಜ್ಯಾಡಳಿತೆಯ ಹೊರಗಿನ ಸಿಪ್ಪೆಯನ್ನು ಅರಾಬರಿಗೆ ಕೊಟ್ಟು ಒಳಗಣ ಸವಿಯನ್ನು ತಾವು ಸೇವಿಸಬೇಕೆಂದು ಒಯಸಿ ಮಾಡಿದ ಕುಟಿಲ ತಂತ್ರಗಳೆಲ್ಲಾ ರಶ್ಯದ ಪ್ರತಿಭಟನೆಯಿಂದ ಮುರಿಯುತ್ತಾ ಬರುತ್ತಿವೆ. ವಾಣಿಜ್ಯ ವ್ಯವಹಾರಗಳ ನೆವಗಳಿಂದ ಅಮೇರಿಕವು ತನ್ನ ಡೊಲ್ಲರು ಸಾಮ್ರಾಜ್ಯವನ್ನು ಪ್ರಾಚೀನ ಆಸ್ಥದಲ್ಲಿ ಸ್ಥಾಪಿಸಲಿಕ್ಕೆ ರಶ್ಯದ ಪ್ರತಿಭಟನೆ ಇರುವುದರಿಂದ ಅಮೇರಿಕಕ್ಕೂ ಈಗ ಭೀಸರವಿದೆ.

ಸ್ವಾತಂತ್ರ್ಯ ಸ್ವಾಭಿಮಾನಗಳಿಗಾಗಿ ಸರ್ವ ತ್ಯಾಗವನು ಮಾಡ ಹೇಸದೆ, ಕಾದಾಡ ಹೊರಟಿರುವ ಏಷ್ಯ ಆಫ್ರಿಕಾ ಖಂಡಗಳ ಜನರು ಒಂದು ಕಡೆ–ಭೂಲೋಕದಲ್ಲೆಲ್ಲಾ ಆಂಗ್ಲ ಭಾಷಾ ಭಾಷಿಗಳ ಮತ್ತು ಆಂಗ್ಲೋ ಸೇಕ್ಸನ ರಕ್ತದ ಜನರ ನಾಯಕತ್ವವನ್ನು ಸ್ಥಾಪಿಸಲೆಳಸುವ ಆಂಗ್ಲ ಅಮೇರಿಕಗಳು ಇನ್ನೊಂದು ಕಡೆ. ಆಂಗ್ಲ, ಅಮೇರಿಕಗಳು ಒಂದು ಹೆಜ್ಜೆಯನಾದರೂ ಮುಂದರಿಸದಂತೆ ಕಾದು ಕೂತಿರುವ ರಶ್ಯವು ಮೂರನೇ ಕಡೆ—ಹೀಗೆ ತ್ರಿಕೋಣಾಕಾರವಾಗಿ ರಚಿತವಾದ ವ್ಯೂಹದ ನಡುವೆ ಲೋಕ ಶಾಂತಿಯನ್ನು ಬೇಡುತ್ತಿರುವ ಭೂದೇವಿಯ ಕರುಣಾಜನಕ ಆಲಾಪವು ಕೇಳಿ ಬರುತ್ತಿದೆ. ಈಗ ಸಮರ ಬಲದಿಂದ ಉನ್ಮತ್ತರಾಗಿರುವ ಎಲ್ಲಾ ಮಹಾರಾಷ್ಟ್ರಗಳಲ್ಲಿ ಮಾತ್ರ ಆ ಆಲಾಪದ ಕಡೆಯಾರೂ ತಮ್ಮ ಮನಸ್ಸನ್ನು ತಿರುಗಿಸಿದಂತೆ ತೋರ ವುದಿಲ್ಲ.

"V"

THE PROTECTION.

If a mother was left unprovided for and if the children were too young to earn a livlihood and maintain the family, how much would not any one feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL
Assurance Company, Ltd.,
HEAD OFFICE: UDIPI (S. INDIA.)

The Badavara Bandhu Group Enterprises

Editors. Printers, Publishers, Bankers, Merchants, Fish Dealers. Motion Picture Producers, Exhibitors. Benefactors. Property Dealers, Provision Dealers, etc., etc.

THROUGH

THEIR ASSOCIATED CONCERNS

1. The Badavara Bandhu.
2. The Badavara Bandhu Printing Press, Ltd.
3. Sri Narayana Guru Press.
4. Sri Narayana Guru Bank Ltd.
5. The South Kanara Fish Industries, Ltd.
6. The Karnataka Theatres, Ltd.
7. Janasons, Ltd.
8. The Badavara Bandhu Colonies.
9. The Badavara Bandhu Orphanage Trust.
10. My Stores.
11. The Vijaya Stores, Ltd.
12. The Badavara Bandhu Hosieries.
13. The West Coast Ice Factory.

Head Office:

MANGALORE, South India.

Telegraphic address:

1. BADAVARA BANDHU
2. MONEY

Post Box No. 110

Pandit Bank, Mangalore

ಪಂಡಿತ್ ಬ್ಯಾಂಕ್,

ಕೋರ್ಟ್ ರಸ್ತೆ, ಮಂಗಳೂರು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡೆಸಲಾಗುವುವು.* ಮುಖ್ಯವಾಗಿ ಚಿನ್ನಾಭರಣ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು.

ಚಿನ್ನಾಭರಣ ಈಡಿನ ಮೇಲೆಹಣವನ್ನು ಕೊಡುವುದು ಈ ಬ್ಯಾಂಕಿನ ವಿಶೇಷ ಗುಣ (Speciality) ಇದರಲ್ಲಿ ರಿಯಾಯಿತಿಯೂ ವಿಶೇಷ-ಒಡ್ಡಿಯೂ ಬಹಳ ಸುಲಭ-ರೀತಿಂ ದೊಡ್ಡದಾದ ಹಾಗೆ ಒಡ್ಡಿ ಮತ್ತಷ್ಟು ಕಡಿಮೆ.

ಕಾಯಂ ಠೇವಣಾತಿಗಳು:

6 ತಿಂಗಳುಗಳಿಗೆ ಸೇ. 2%
1 ವರ್ಷಕ್ಕೆ ಸೇ. 2½%

ಚಾಲ್ತಿ ಠೇವಣಾತಿ:

ಪ್ರತಿದಿನದ ಶಿಲ್ಕಿನ ಮೇಲೆ ಸೇ. ½%
ಸೇವಿಂಗ್ಸ್ ಬ್ಯಾಂಕ್: ಸೇ. 1½%

PANDIT SHIVA RAO, B.A., LL.B.
SOLE PROPRIETOR.

PANDIT DEVADAS RAO.
AGENT.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಹಿತ್ತಾಳೆ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ,

ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.

Kalmanje Vyasacharya
Brass-ware Merchant,
UDIPI, S. I.

THE CANARA BANKING CORPORATION LIMITED.

ESTD: 1906.

(Incorporated in British India with limited liability.)

SEASON DEPOSITS.

for Rs. 10,000 and above are now accepted at all offices of the Corporation at the following rates

3—4 months 2¼% 6 months 2½%

These deposits will however not be accepted to run beyond 31—8—1946

With a net work of Branches and Agencies we offer the best of banking facilities.

XXVIII] ಮಂಗಳೂರು ತಾರೀಕು ೩೦—೪—೧೯೪೬ [೯

೧೪೬೪ ಪಾರ್ಥಿವ ಸಂವತ್ಸರದ ಚೈತ್ರ ಬ. ೧೪ ಮಂಗಳವಾರ

ಪ್ರಚಲಿತ ಸಮಾಚಾರ

ಕಳೆದ ತಾ. ೨೫ರಲ್ಲಿ ದಿಲ್ಲಿಯಲ್ಲಿ ಗಾಂಧಿಜಿಯವರು ಉಳಿದುಕೊಂಡಿರುವಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒಂದು ಚಿಕ್ಕ ಅಧಿವೇಶನವು ನಡೆದು ಹೋಯಿತು. ಅದರಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಕಾಂಗ್ರೆಸಿನವರನ್ನೂ ಲೀಗಿನವರನ್ನೂ ಹತ್ತಿರ ತರಲು ಮಾಡಿದ ಪ್ರಯತ್ನಗಳ ವಿಚಾರದಲ್ಲಿ ಚರ್ಚಿಸಲಾಯಿತು. ಕಾಂಗ್ರೆಸಿನವರೇ ಮಾತುಕತೆಗಳನ್ನು ನಡೆಸುವ ಹಾಗೆ ಎಂ. ಜಿನ್ನರು ರಾಷ್ಟ್ರಪತಿಗಳಿಗೆ ಬರೆದರೆ ಆಗ ಲೀಗ್—ಕಾಂಗ್ರೆಸ ಗಳೊಳಗೆ ಮಾತುಕತೆ ನಡೆಸಲು ಅಡ್ಡಿಯಿಲ್ಲವೆಂದು ವರ್ಕಿಂಗ್ ಕಮಿಟಿ ನಿರ್ಧರಿಸಿತು. ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ತಮ್ಮ ಪರವಾಗಿ ಗಾಂಧಿಜಿಯವರನ್ನು ನೇಮಿಸಿದಲ್ಲಿ ಮಾತ್ರವೇ, ಲೀಗ್—ಕಾಂಗ್ರೆಸ್‌ಗಳೊಳಗೆ ಮಾತುಕತೆ ನಡೆಯಬಹುದೆಂದು ಎಂ. ಜಿನ್ನರು, ಅಭಿಪ್ರಾಯ ಪಟ್ಟಿರುವುದರಿಂದ, ಲೀಗ್ ಕಾಂಗ್ರೆಸ್‌ಗಳ ಎಣಿಟಂಗ್ ನಡೆಯುವುದು ಸಂದೇಹಾಸ್ಪದವೆಂದಿದ್ದರೂ ಅಸಾಧ್ಯವೇನೂ ಅಲ್ಲ.

ಬ್ರಿಟಿಷ್ ನಿಯೋಗ ಗೋಷ್ಠಿಯವರು ಇದುವರೆಗೆ ಅವರಿವರನ್ನು ಕಂಡು, ಉದ್ದುದ್ದ ಸಂಭಾಷಣೆಗಳನ್ನು ಮಾತ್ರ ಬೆಳೆಸಿರುವರಲ್ಲದೆ, ಬೇರೆ ಯಾವ ಪ್ರಯೋಜನವೂ ಉಂಟಾಗಿಲ್ಲ. ಈ ಗೋಷ್ಠಿಯವರು ಎಂ. ಜಿನ್ನರನ್ನು ಸಮ್ಮತಿಸುವಲ್ಲಿ ಬಹಳ ವೇಳೆಯನ್ನೂ ಶಕ್ತಿಯನ್ನೂ, ವೆಚ್ಚ ಮಾಡಿದ್ದಾರೆ. ಇಷ್ಟು ಮಾಡಿಯೂ ಎಂ. ಜಿನ್ನರು ಜಗ್ಗದಿದ್ದರೆ, ಈ ಗೋಷ್ಠಿಯವರಿನ್ನೂ ಕಾಯದೆ ಕಾಂಗ್ರೆಸ್—ಲೀಗಿನ ಹೊರತಾದ—ಇತರ ರಾಜಕೀಯ ಪಂಗಡ ಇವುಗಳ ಪ್ರತಿನಿಧಿಗಳುಳ್ಳ ಒಂದು ತಾತ್ಕಾಲಿಕ ಸರಕಾರವನ್ನು ಕೂಡಲೇ ರಚಿಸುವುದು ಅಗತ್ಯವೆಂದು ಹಲವು ರಾಜಕೀಯ ತಜ್ಞರ ಅಭಿಪ್ರಾಯವಾಗಿದೆ.

ಬ್ರಿಟಿಷ್ ಮಂತ್ರಿಮಂಡಲದ ನಿಯೋಗ ಗೋಷ್ಠಿಯವರು ಇನ್ನೂ ಆ ಈ ನಾಯಕರನ್ನು ಕರೆದು ಕರೆದು ಮಾತಾಡಿಸುತ್ತಲೇ ಇದ್ದಾರೆ. ಈ ಸಂದರ್ಭದಲ್ಲಿ, ಸರ್ ಕ್ರಿಪ್ಸ್‌ರ ಪ್ರಯತ್ನಗಳು ವಿಶೇಷವಾಗಿ ನಡೆಯುತ್ತಿರುವುದೂ, ಕಾಂಗ್ರೆಸಿನ ಹಾವ ಭಾವವು ಈ ಗೋಷ್ಠಿಯವರಿಗೆ ಅನುಕೂಲವಾಗಿರುವಂತೆ ತೋರುತ್ತಿರುವುದೂ ಪ್ರಶಂಸನೀಯವಾಗಿಯೂ ಸಂತೋಷ ಪ್ರದವಾಗಿಯೂ ಇದೆ. ಹೇಗೂ ಸದ್ಯಕ್ಕೆ ಲೀಗ್—ಕಾಂಗ್ರೆಸಿನವರ ವಿವಾದ ಅವರವರೊಳಗೇ ತೀರ್ಮಾನವಾಗುವಂತೆ ತೋರುವುದಿಲ್ಲವಾಗಿ, ನಿಯೋಗ ಗೋಷ್ಠಿಯವರು, —ಈಗ ವಾರ್ತೆ ಇರುವಂತೆ,—ತಮ್ಮದೇ ಆದ ಯೋಜನೆಯನ್ನು ತಯಾರಿಸುತ್ತಿರುವರೆಂಬುದು ಉಚಿತವೇ ಸರಿ. ಇದರ ಪರಿಣಾಮವಾಗಿ ಪ್ರಥಮತಃ ಇನ್ನೆರಡು ವಾರಗಳಲ್ಲೇ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಡುವುದಾದರೆ, ಎಷ್ಟೋ ಉತ್ತಮವಾದೀತು—ಆದರೆ ಅಷ್ಟು ಸುಲಭವೆಂದು ತೋರದು

ಮದ್ರಾಸಿನಲ್ಲಿ ಎಸೆಂಬ್ಲಿ ಕಾಂಗ್ರೆಸ್ ಪಾರ್ಟಿಯವರು ತಮ್ಮ ನಾಯಕರನ್ನೇ ನೋ ಆರಿಸಿದ್ದಾಯಿತು. ಇನ್ನು ಮಂತ್ರಿ ಮಂಡಲವೂ ಇಷ್ಟರಲ್ಲೇ ಆಗುತ್ತದೆ, ಆಯಿತು ಎನ್ನುವ. ಆದರೆ ಕಾಂಗ್ರೆಸ್ ಹೈ ಕಮಾಂಡಿನ ಅನುಗ್ರಹದೃಷ್ಟಿ ಇವರ ಮೇಲಿಲ್ಲ; ಇವರನ್ನು ಇವರ "ಇಚ್ಛಾನುಸಾರ"ವಾಗಿಯೇ ಬಿಟ್ಟಿದ್ದಾರೆ. ಇಷ್ಟೇ ಅಲ್ಲದೆ, ಈ ಕಾಂಗ್ರೆಸ್ ಶಾಸನಸಭಾ ಸದಸ್ಯರು ಕೆಲವರು, ಮೇಲಿಂದ ಮೇಲೆ, ಉಪಚಾರೋಕ್ತಿಗಳನಾಡುತ್ತ ಇದ್ದರೂ, ಒಳಗಿಂದೊಳಗೆ, ಇವರಲ್ಲಿ ಕೆಲವರ ಮುಖ ಹಲವು ಕಡೆ. ಇವರಲ್ಲಿ ರಾಜಾಜಿಯವರ ಪಕ್ಷಪಾತಿಗಳು ಮುಂದೆ ಹೇಗೆ ವರ್ತಿಸುವರೋ, ಅದೀಗ ಹೇಳಕೂಡದು. ಅಂತೂ ಈ ಮಂತ್ರಿಮಂಡಲದ ಕಾರ್ಯಭಾರಗಳು ಒಮ್ಮತದಿಂದ ಸಾಗಿ ಅದು ನಮ್ಮ ಆಧಿಪತ್ಯಕ್ಕೆ ಒಳ್ಳೆಯ ಹೆಸರನ್ನು ತರಲೆಂದು ಹಾರೈಕೆ.

——

ರೇಶನಿನ ಸಂಬಂಧದ ಪ್ರೆಸ್ ನೋಟು

೧೯೪೬ನೇ ಇಸವಿ ರೇಶನಿಂಗ್ ಆರ್ಡರ್ ಪ್ರಕಾರ ಮಂಗಳೂರು ರೇಶನಿಂಗ್ ಏರಿಯಾ ಒಳಗೆ ತಾ. ೫-೫-೪೬ರಿಂದ ಮೈದಾ, ಸೋಜಿ ಮತ್ತು ಬೇಕರ್ಸ್ ಬ್ರೆಡ್ ಈ ಮೂರು ಪದಾರ್ಥಗಳನ್ನು ರೇಶನ್ ಪದಾರ್ಥಗಳಾಗಿ ಮಾತ್ರ ಪಡಕೊಳ್ಳಬಹುದು. ಈ ಪದಾರ್ಥಗಳು ಒಬ್ಬರಿಗೆ ದಿವಸಕ್ಕೆ ಸಿಕ್ಕುವ ೧೨ ಔನ್ಸು ರೇಶನ್ ಒಳಗೆ ಮಾತ್ರ ಸಿಕ್ಕುವದು. ಮನೆ ವಾರ್ತೆ ಕಾರ್ಡಿನವರು ಮೈದಾ, ಸೋಜಿ ಮತ್ತು ಬೇಕರ್ಸ್ ಬ್ರೆಡ್‌ಗಳನ್ನು ಸಮ್ಬಂಧಪಟ್ಟ ರೇಶನ್ ಶಾಪಿನಿಂದ ಪಡಕೊಳ್ಳಬೇಕು. ಬ್ರೆಡ್ ಟಿಕೇಟನ್ನು ಬೇಕರಿಯಲ್ಲಿ ಯಾ ಬ್ರೆಡ್ ತಯಾರಿಸುವವರಲ್ಲಿ ಹಾಜ್ರಿ ಪಡಿಸಿ ಬ್ರೆಡ್‌ನ್ನು ಪಡಕೊಳ್ಳಬೇಕು. ಎಸ್ಟೆಬ್ಲಿಷ್‌ಮೆಂಟುಗಳ ಮ್ಯಾನೆಜರು ಸೆಂಟ್ರಲ್ ರೇಶನಿಂಗ್ ಆಫೀಸರರ ಮುಂದೆ ಎಗ್ರಿಮೆಂಟ ಬರಕೊಟ್ಟು ಡಿಪೊಸಿಟ್ ಹಣ ಕಟ್ಟಿ, ಮೈದಾ ಮತ್ತು ಸೋಜಿಯ ಬಗ್ಗೆ ರೇಶನ್ ಒಫೊರಿಟಿಗಳನ್ನು ಬ್ರೆಡ್ ಬಗ್ಗೆ ಬ್ರೆಡ್ ಟಿಕೇಟುಗಳನ್ನು ಪಡಕೊಳ್ಳಬೇಕು. ಬ್ರೆಡ್‌ನ್ನು ತಾ. ೫-೫-೪೬ರಿಂದ ರೇಶನಿಂಗ್ ಆಫೀಸರರಿಂದ ಅಧಿಕಾರ ಸಿಗಲ್ಪಟ್ಟ ಬೇಕರಿಯಾ ಇತರ ಬ್ರೆಡ್ ಎಕ್ಕಯಿಸುವ ಎಸ್ಟೆಬ್ಲಿಷ್‌ಮೆಂಟ್‌ನವರು ಮಾತ್ರ ಮಾರಬಹುದು. ಅಂಥಾ ಅಧಿಕಾರ ಬೇಕಾದವರು ಮತ್ತು ಮೈದಾ ಮತ್ತು ಸೋಜಿ ಬೇಕಾದ ಎಸ್ಟೆಬ್ಲಿಷ್‌ಮೆಂಟು ಮ್ಯಾನೆಜರು ತಾ. ೨೭-೪-೪೬ರ ಒಳಗೆ ರೇಶನ್ ಆಫೀಸರರಿಗೆ ಫಾರ್ಮು ಅರ್ಜಿಯನ್ನು ತಲ್ಪಿಸಿ ಅವರ ಮುಂದೆ ಹಾಜ್ರಿ ಆಗಿ ಎಗ್ರಿಮೆಂಟು ಬರಕೊಟ್ಟು ಅಗತ್ಯವುಳ್ಳ ಡಿಪೊಸಿಟ್ ಹಣ ಕಟ್ಟತಕ್ಕದ್ದು. ಹೆಚ್ಚು ಬ್ರೆಡ್ ಉಪಯೋಗಿಸುವವರು ಬೇಕರಿಯಲ್ಲಿ ತಮಗೆ ಬೇಕಾದ ಬ್ರೆಡ್‌ಸ್ ಮುಂಚಿತವಾಗಿಯೇ ರಿಜಿಸ್ಟ್ರಿ ಮಾಡಿ ಇಡುವ ಬಗ್ಗೆ ೪ ವಾರದ ವರೆಗಿನ ಟಿಕೇಟುಗಳನ್ನು ಒಂದೇ ಸಲ ಪಡಕೊಳ್ಳಬಹುದು. ಹೆಚ್ಚಿನ ಅನುಭವವನ್ನು ಸೆಂಟ್ರಲ್ ರೇಶನಿಂಗ್ ಆಫೀಸಿನಲ್ಲಿ ಆಗಲಿ ಸಮ್ಬಂಧಪಟ್ಟ ಸರ್ಕಲ್ ಆಫೀಸಿನಲ್ಲಿ ಆಗಲಿ ಪಡಕೊಳ್ಳಬಹುದು.

ಎಚ್. ಸುಂದರರಾವ,
ರೇಶನಿಂಗ್ ಆಫೀಸರ್.

ಜಿಲ್ಲಾ ಬೋರ್ಡ್ ಎಲೆಟಂಗ್—ಮಂಗಳೂರು

ಇನ್ನೂ ೧೭ ಕೇಂದ್ರಗಳಲ್ಲಿ ಕಡ್ಡಾಯ ಶಿಕ್ಷಣ

ಕಳೆದ ವಾರ ಜರುಗಿದ ನಮ್ಮ ಜಿಲ್ಲಾ ಬೋರ್ಡ್ ಎಲೆಟಂಗಿನಲ್ಲಿ ಈ ಜಿಲ್ಲೆಯ ೨೭ ಹಳ್ಳಿಗಳ ೧೭ ಕೇಂದ್ರಗಳಲ್ಲಿ ಹೊಸದಾಗಿ ಕಡ್ಡಾಯ ಉಚಿತ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವಂತೆ ನಿರ್ಧರಿಸಲಾಯಿತು. ಅದರ ವಿವರವಿದು:—

ಕುಂದಾಪುರ ತಾಲೂಕಿನ ಬೈಂದೂರು ಕೇಂದ್ರ (ಯಡ್ತರೆ ಗ್ರಾಮ;) ಗಂಗೊಳ್ಳಿ, (ಗುಜ್ಜಾಡಿ;) ಕೋಟೇಶ್ವರ, (ಕೋಟೇಶ್ವರ) ಉಡುಪಿ:-ಕಲ್ಯಾಣಪುರ, (ತೋನ್ಸೆ ಗ್ರಾಮ ಗಳೆರಡು) ಪಡುಬಿದ್ರೆ (ನಡುಸಾಲ್;) ಫಲಿಮಾರು (ಫಲಿಮಾರು;) ಕಾರ್ಕಳ:-ಬೈಲೂರು (ಬೈಲೂರು, ಕೌಡೂರು, ನೀರೆ;) ಸಾಣೂರು, (ಸಾಣೂರು;) ನಿಟ್ಟೆ, (ನಿಟ್ಟೆ;) ಮಂಗಳೂರು:-ಹೆಜ್ಜಾಡಿ, (ಹೆಜ್ಜಾಡಿ;) ಮೂಲ್ಕಿ, (ಬಪ್ಪನಾಡು, ಕಾನಾರ್ಡು, ಮಾನಂಪಾಡಿ;) ಬಂಟ್ವಾಳ, (ಬಂಟ್ವಾಳ; ಬಂಟ್ವಾಳ ಮೂಡು;)

ಪುತ್ತೂರು:-ಬೆಳ್ತಂಗಡಿ, (ಉಜ್ರೆ, ಬೆಳ್ತಂಗಡಿ, ಗುರುವಾಯನಕೆರೆ;) ಸುಳ್ಯ (ಸುಳ್ಯ;) ಎತ್ತಲ, (ಕೇಪು;) ಕಾಸರಗೋಡು:-ಮಂಜೇಶ್ವರ, (ಬಂಗ್ರ ಮಂಜೇಶ್ವರ, ಉದಿಯಾವರ;) ಹೊಸದುರ್ಗ, (ಕಾಞಗಾಡು-ಬಳ್ಳ;)

ನೂತನ ಶಾಲಾ ಪ್ರವೇಶೋತ್ಸವ ವಿಟ್ಲ

ಮಾಡತಡ್ಕ ಎಂಬಲ್ಲಿ ಊರ ಮಹನೀಯರಿಂದ ಕಟ್ಟಿಸಲ್ಪಟ್ಟ ನೂತನ ಶಾಲೆಯಾದ "ನೆಶನಲ್ ಎಲಿಮೆಂಟರಿ ಶಾಲಾ" ಕಟ್ಟಡದ ಪ್ರಾರಂಭೋತ್ಸವವು ಈಚೆಗೆ ರಾವ್ ಸಾಹೇಬ ಎ. ಆರ್. ಎಲ್. ಎಸ್. ಅರಸು ಇವರಿಂದ ನಡೆಯಿತು. ಮೊದಲಿಗೆ ನೂತನ ಶಾಲೆಯೊಳಗೆ ಗಣ ಹೋಮವಾಯಿತು. ಊರ ಮಹನೀಯರು, ಪುತ್ತೂರು ರೇಂಜಿನ ಶಾಲಾ ಇನ್ಸ್‌ಪೆಕ್ಟರ್ ಶ್ರೀ ಗೋಪಾಲನವರೊಡನೆ, ರಾವ್ ಸಾಹೇಬರನ್ನು ಕೂಡಿಕೊಂಡು ಶಾಲಾ ಮಕ್ಕಳಿಂದ ಗೀತವನ್ನು ಹಾಡಿಸುತ್ತ ಶಾಲಾ ಸುತ್ತ ಬಂದರು. ಎದುರು ಬಾಗಿಲು ಬಳಿ ಸಮೂಪಿಸುತ್ತಲೇ ರಾವ್ ಸಾಹೇಬರು ಈ ಶಾಲಾ ಪ್ರವೇಶೋತ್ಸವವನ್ನು ನೆರವೇರಿಸುವಂತೆ ಊರ ಮಹನೀಯರ ಪರವಾಗಿ ಅರಸರನ್ನು ಶ್ರೀ। ತಿರುಮಲೇಶ್ವರ ಭಟ್ಟರು ಕೇಳಿಕೊಂಡರು. ರಾವ್ ಸಾಹೇಬರು ಹಿತವಚನವನಿತ್ತು ದೇವರೊಡನೆ ಶಾಲೆಯ ಏಳಿಗೆಗಾಗಿ ಬೇಡಿಕೊಳ್ಳುತ್ತ ನೂತನ ಶಾಲೆಯ ಬಾಗಿಲನ್ನು ತೆರೆದರು. ಮುಂದೆ ಅಲ್ಲಿನ ಅರಮನೆಯ ರಾಮಚಂದ್ರ ವರ್ಮರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಶಾಲೆಯ ಇತಿಹಾಸವನ್ನು ಮುಖ್ಯೋಪಾಧ್ಯಾಯರು ತಿಳಿಸಿದ ಮೇಲೆ ಹೊಸ ಕಟ್ಟೋಣಕ್ಕೆ ಸಹಾಯವೀಯುವುದಾಗಿ ವಾಗ್ದತ್ತ ಮಾಡಿದವರ ಹೆಸರು, ವಸೂಲು ಬಂದ ಹಣ, ಖರ್ಚಾದ ಹಣ ಇತ್ಯಾದಿಗಳನ್ನು ಶ್ರೀ. ತಿರುಮಲೇಶ್ವರ ಭಟ್ಟರು ತಿಳಿಸಿ ಇನ್ನೂ ಶಾಲೆಯ ಸಾಧನ ಇತ್ಯಾದಿಯಾಗಬೇಕಾದರೆ ಊರ ಹಾಗೂ ಪರ ಊರ ಮಹನೀಯರ ಉದಾರ ಸಹಾಯ ಅಗತ್ಯವೆಂದರು. ಶಾಲಾ ಇನಸ್ಪೆಕ್ಟರ್, ಗೋಪಾಲರವರು, ವಿದ್ಯೆಯ ಮಹತ್ವವನ್ನು ವಿವರಿಸಿ ಶಾಲೆಯ ಏಳಿಗೆಗೆ ಪ್ರತಿಯೊಬ್ಬರೂ ಸಹಕರಿಸಬೇಕೆಂದು ವಿನಂತಿಸಿದರು. ಶ್ರೀ. ಜನಾರ್ದನ ನಾಯ್ಕರು ಶಾಲೆಗೆ ಹೊರಗಿನ ಮಹನೀಯರ ಸಹಾಯ ಕೋರಿ ಮಾತಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾದೊಡನೆ, ಲಘು ಉಪಹಾರವಾಯಿತು. ಶ್ರೀ. ತಿರುಮಲೇಶ್ವರ ಭಟ್ಟರು ಎಲ್ಲರಿಗೂ, ಧನ್ಯವಾದಗಳನ್ನು ಹೇಳಿದರು. ಮಂಗಳ ಗೀತದೊಂದಿಗೆ ಸಮಾರಂಭವು ಕೊನೆಗೊಂಡಿತು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಯಾ ಇನ್ನಾವ ಕಾರಣವಿದ್ದರೂ — 'ಕುಮಾರಿ' (Govt. Regd.) ನಿಶ್ಚಿತ ನಿರುಪದ್ರವಿ. ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಘಂಟೆಗಳಲ್ಲಿ ಪರಿಯುವುದು. ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ!! ಬೆಲೆ ರೂ. 3/-. ದೀರ್ಘಕಾಲದ ಮತ್ತು ಕಠಿಣತರ ಸಂದರ್ಭಗಳಿಗೆ ವಿಶೇಷ ತಯಾರಿ. ರೂ. 5/-. ಪ್ರತಿ 6 ತಿಂಗಳ ಸಂತತಿ ಪ್ರತಿಬಂಧಕಕ್ಕೆ ರೂ. 4/- (ವಿ. ಪಿ. 12 ಆಣೆ ಹೆಚ್ಚಿಗೆ.) Mrs. P. Deves F. D. S. (K) Tollygunge, Calcutta.

ಸ್ವಾಕಿಸ್ಪರು:-ಷಾ ಕಂಪೆನಿ, ಮಂಗಳೂರು.

The Saraswathi Printing Works, Limited, MANGALORE.

NOTICE

Notice is hereby given that the Ordinary Annual General Meeting of the shareholders of the Company will be held at the Registered Office of the Company at Mangalore, on Sunday the 19th May 1946 at 3 P. M., to transact the following business:—

1. To receive, consider and adopt the Directors' Report and the audited Balance Sheet as at 31st March 1946, the Trading and Profit & Loss Account for the year ending 31st March 1946.
2. To declare a dividend.
3. To elect two Directors in the place of the Directors, viz: Messrs. D. Puttaswamy, B.A., B.L., & Y. Rama Rao, who retire by rotation but are eligible for re-election (under articles Nos. 118, 119 and 120.)
4. To appoint an Auditor for the year 1946—'47 and to fix his remuneration. The last year's Auditor Mr. A. Umanatha Rao, B.A., G.D.A. R. A., is eligible for re-election and is willing to accept the office.

It is requested that you will be kind enough to attend the meeting. If it should be inconvenient for you to do so, you may appoint another shareholder of the Company as your proxy.

The proxy form should be duly filled in and stamped with two one anna revenue stamps, bear your signature and should be deposited at the Registered Office of the Company by 3 P. M., on 16th May 1946.

Notice is also given that the Register of Members of the Company will remain closed from the 13th May 1946 to 26th May 1946 (both days inclusive) during which period no transfer of shares will be registered.

(By order of the Board)
(Sd.) U. Ganesh Shenai,
Manager.

Office of the S. P. Works, Ltd.
Mangalore, 28th April 1946.

Phone No. 95] ಜಯಾ ಕೆಫೆ [ಫೋನು ನಂಬ್ರ ೯೫
(ರಿಜಿಸ್ಟರ್ಡ್)
ಬ್ರಾಹ್ಮಣರ ಶ್ರೇಷ್ಠ ತರಗತಿಯ
ಬೋರ್ಡಿಂಗ್-ಲಾಜಿಂಗ್
ಹಂಪನಕಟ್ಟೆ, ಮಂಗಳೂರು.
ಶುದ್ಧ ತುಪ್ಪದ ರುಚಿಶುಚಿಯ ಬಗೆಬಗೆಯ
ಸಿಹಿ ತಿಂಡಿ ಸರ್ವದಾ ಸಿದ್ಧವಿದೆ.
ನಮ್ಮ ಕೊಟಡಿಗಳು
ಆಧುನಿಕ ಸರ್ವಾನುಕೂಲತೆಗಳಿಂದ ಸುಸಜ್ಜಿತವಾಗಿವೆ.
ಸಂದರ್ಶಕರ ಸೇವೆ, ಮೇಲ್ವಿಚಾರ, ಅವರತೃಪ್ತಿಗಳೇ ಸಂಸ್ಥೆಯ ಪ್ರಾಮುಖ್ಯ ಧ್ಯೇಯ
ಹೆಡ್ ಆಫೀಸ್: ಕೊಯಮುತ್ತೂರು.
ಎನ್. ವಿ. ಭಟ್,
ಪ್ರೊಪ್ರೈಟರ್.

ಮಂಗಳೂರು ವೈಶ್ಯ ಶಿಕ್ಷಣ ಸಮಿತಿ —ಸಮಿತಿಯ ಹೊಸ ಕಟ್ಟಡದ ಆರಂಭೋತ್ಸವ ಕಟ್ಟಡದ ದಾತರ ಭಾವಚಿತ್ರ ಅನಾವರಣ

ಕಳೆದ ತಾ. ೨೭ನೇ ಶನಿವಾರ ಸಂಜೆ, ಸ್ಥಳೀಯ ವೈಶ್ಯ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಜೇಡಿಗುಡ್ಡೆಯಲ್ಲಿ ನೂತನವಾಗಿ ಕಟ್ಟಿಸಿದ ಸಮಿತಿಯ ಕಟ್ಟಡದ ಮಹಡಿಯಲ್ಲಿ ಕೆಲವೊಂದು ವಿಶೇಷ ಸಮಾರಂಭಗಳು ಸಂಭ್ರಮದಿಂದ ನಡೆದುವು ಪೂನೆಯ ಎಂ ಇ. ಸೊಸೈಟಿ ಕಾಲೇಜಿನ ಪ್ರಿನ್ಸಿಪಾಲ ಮತ್ತು ಇಂಗ್ಲಿಷ್ ಪ್ರೊಫೆಸರರಾದ ಶ್ರೀ। ಕೆ. ಎಂ. ಖಾಡೆ ಎಂ ಎ. [ಬೊಂಬಯಿ] ಎಂ. ಎ. (ಕೆಂಟರ್‌ಬರಿ) ಅವರು ಅಂದಿನ ಸಭಾಧ್ಯಕ್ಷರಾಗಿದ್ದರು, ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ. ಎಸ್ ಜಿ. ಮಂಗಳೂರ್‌ಕರ್ ಅವರು ಸ್ವಾಗತ ಭಾಷಣ ಮಾಡಿದರು.

ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀ. ಕೆ. ರಾಮವರ್ಮ ರಾಜ ಅವರು, ಈ ಸಮಿತಿಯ ಹೊಸ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸುತ್ತ ಈ ಕಟ್ಟಡವನ್ನು ಸುಮಾರು ೧೫ ಸಾವಿರ ರೂ. ಗಳ ವೆಚ್ಚದಿಂದ ಕಟ್ಟಿಸಿ ಅದನ್ನು ಆ ಸಮಿತಿಯ ಮತ್ತು ವೈಶ್ಯ ಸಮಾಜದ ಉಪಯೋಗಕ್ಕೆ ದಾನವಾಗಿ ಬಿಟ್ಟುಕೊಟ್ಟ ದಾತೃಗಳಾದ ಇಲ್ಲಿಯ ಸುಪ್ರಸಿದ್ಧ ಬೀಡಿ ಕೈಗಾರಿಕೆ ಮಾಲಕರಾದ ಶ್ರೀ॥ ಪುತ್ತು ವೈಕುಂಠ ಸೇಟರ ಔದಾರ್ಯವನ್ನು ಕೊಂಡಾಡಿದರು.

ಉಡುಪಿಯ ಸಿಂಡಿಕೇಟ್ ಬೇಂಕಿನ ಡಾ। ಟಿ. ಮಾಧವ ಪೈಯವರು ಈ ಕಟ್ಟಡದ ದಾತೃಗಳಾದ ಶ್ರೀ। ಪುತ್ತು ವೈಕುಂಠ ಸೇಟರ ಭಾವಚಿತ್ರವನ್ನು ಅನಾವರಣ ಮಾಡುತ್ತ ಈ ಜಿಲ್ಲೆಯ ಶಿಕ್ಷಣಕಾರ್ಯ, ಜಾತೀಯ ಶಿಕ್ಷಣದ ಕುರಿತಾಗಿ ಆಯಾ ಸಮಾಜಗಳು ಇಟ್ಟುಕೊಳ್ಳಬೇಕಾಗಿರುವ ನಿತಿ- ಮೊದಲಾದ ಮುಖ್ಯಾಂಶಗಳ ಪ್ರಸ್ತಾವ ಮಾಡಿ ಶ್ರೀ। ಸೇಟರ ಗುಣಾತಿಶಯ, ಅವರು ಸಲ್ಲಿಸಿದ ಸೇವೆ ಇತ್ಯಾದಿಗಳ ಕುರಿತು ಪ್ರಶಂಸಿಸಿ ಮಾತಾಡಿದರು.

ವೈಶ್ಯ ವಿದ್ಯಾರ್ಥಿ ಸಂಘದ ರಜತೋತ್ಸವ

ಮೇಲ್ಕಂಡ ಸಮಿತಿಯ ಆಶ್ರಯದಲ್ಲಿ ವೈಶ್ಯ ವಿದ್ಯಾರ್ಥಿ ಸಂಘದ ರಜತೋತ್ಸವವು ಅದೇ ಮೇಲ್ಕಂಡ ವಠಾರದಲ್ಲಿ ತಾ. ೨೭ನೇ ಸಂಜೆ, ಮುನ್ನಾ ದಿನದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿಯೇ ಜರುಗಿತು. ಸಮಾರಂಭಕ್ಕಾಗಿ ಬಂದ ಸಂದೇಶಗಳನ್ನು ಶ್ರೀ. ಎಚ್. ಗಣಪತಿರಾವ್ ಅವರು ಓದಿದರು. ರಜತೋತ್ಸವದ ವರದಿಗಳನ್ನು ಸಮಿತಿಯ ಕಾರ್ಯದರ್ಶಿ ಶ್ರೀ। ಎಚ್. ವಿಶ್ವೇಶ್ವರ ರಾವ್ ಅವರು ವಾಚಿಸಿದರು. ಅಧ್ಯಕ್ಷರು ಬಹು ಮಾನ ಎತರಣೆ ಮಾಡಿ ತಮ್ಮ ವಿಚಾರ ಪೂರ್ಣವಾದ ಭಾಷಣವನ್ನು "ಮರಾಠಿ" ಭಾಷೆಯಲ್ಲಿ ಮಾಡಿದರು.

ಧನ್ಯವಾದಾರ್ಪಣೆ, ನರ್ತನ ನಾಟಕಾದಿ ವಿನೋದಗಳೂ ಇದ್ದುವು. ಶ್ರೀ। ಎಚ್.



ಸುಂದರರಾವ್ ಅವರ ಸಹೋದರ ಶ್ರೀ। ತಾರಾನಾಥ್ ರಾವ್(ತಬ್ಲಾ ವಿದ್ವಾಂಸರು) ಮತ್ತು ಅವರ ಸಂಗಡಿಗರ ಮನೋಹರವಾದ ಹಿಮ್ಮೇಳದಿಂದ ವಿವಿಧ ವಿನೋದಾವಳಿಗಳಿಗೆ ಕಳೆ ಏರಿತ್ತು.

——

ಡಿಲ್ಲಿಯಲ್ಲಿ ಸಂಯುಕ್ತ ಸಮ್ಮೇಳನ ಜರಗಲಿ।

ಈಚೆಗೆ ಬಂದಿರುವ ವಾರ್ತೆಗಳ ಮೇರೆಗೆ—ಹೊಸ ಡಿಲ್ಲಿಯಲ್ಲಿ ಒಂದು ಸಂಯುಕ್ತ ಸಮ್ಮೇಳನವು ಜರುಗುವುದಾಗಿ ತಿಳಿದುಬಂದಿದೆ. ಈ ಸಮ್ಮೇಳನದಲ್ಲಿ ಬ್ರಿಟಿಷ್ ಮಂತ್ರಿಮಂಡಲದ ನಿಯೋಗ ಗೋಷ್ಠಿಯವರೂ ವೈಸರಾಯರೂ; ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಾಲ್ಕು ಮಂದಿ ಸದಸ್ಯರೂ, ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯ ನಾಲ್ಕು ಮಂದಿ ಸದಸ್ಯರೂ—ಹೀಗೆ ಒಟ್ಟು ೧೨ ಮಂದಿ ಭಾಗ ವಹಿಸುವವರಾಗಿದ್ದಾರೆ. ರಾಷ್ಟ್ರಪತಿ ಮೌಲಾನಾ ಆಜಾದರು ತಮ್ಮ ಮೂವರು ಸಂಗಡಿಗರೊಡನೆ ತಕ್ಕ ರೀತಿಯಲ್ಲಿ ವ್ಯವಹರಿಸುವ ಹಾಗೆ ಅಧಿಕಾರ ಪಡೆದಿದ್ದಾರೆ. ಅದೇ ರೀತಿಯಲ್ಲಿ ಎಂ. ಜಿನ್ನರಿಗೂ (ಅವರ ಮೂವರು ಸಂಗಡಿಗರೊಡನೆ) ತಕ್ಕ ವ್ಯವಹಾರ ನಡೆಸುವ ಹಾಗೆ ಅಧಿಕಾರ ದೊರಕಿದೆ. ಈ ಕಾನ್ಫರೆನ್ಸಿನ ತಾರೀಖು ಜೀಗನೇ ನಿರ್ಧಾರವಾಗಬಹುದು.

For Best Optical Goods & Rubber Stamps
M. S. PRABHU & Co.
Hampankatta, MANGALORE.
FOUNTAIN PEN REPAIRING A SPECIALITY.

ಬೊಂಬಯಿ 'ಎಕ್ಸ್‌ಪ್ರೆಸ್' ಗಾಡಿಯಲ್ಲಿ ನೇತಾಜಿಯವರು?

ಕಳೆದ ತಾ. ೧೫ರಲ್ಲಿ ಆಕ್ರೋಣಂ ಸ್ಟೇಶನ್‌ದ ಶ್ರೀ ಕೆ. ಎಸ್. ಎಂ. ಸ್ವಾಮಿ ಅವಧಾನಿ ಎಂಬವರು ಬೊಂಬಯಿ ಎಕ್ಸ್‌ಪ್ರೆಸಿನ ಎರಡನೇ ತರಗತಿಯ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಹಾಗೆ, ಮುಸಲ್ಮಾನ ಉಡುಪಿನ ಒಬ್ಬ ಗೃಹಸ್ಥ ತಮ್ಮ ಪಕ್ಕದಲ್ಲಿ ಕುಳಿತದ್ದನ್ನು ಕಂಡು, ಅವರಲ್ಲಿ ಆ ಸುಭಾಸರ ವ್ಯಕ್ತಿತ್ವ, ಆಕಾರಗಳ ಹೋಲಿಕೆ ಕಂಡು, ಅವಧಾನಿಗಳು ಸಂದೇಹ ಪಟ್ಟು ಇವರನ್ನು ಮಾತಾಡಿಸಿದ ಹಾಗೂ ಅವರು ಮಾತಾಡದೆ ಇವನ್ನು ಕುಳ್ಳಿರುವಂತೆ ಸಂಜ್ಞೆ ಮಾಡಿದ ಹಾಗೂ ಅನಂತರ ಅವಧಾನಿಗಳು ಅವರಿಗೆ ಮರ್ಯಾದೆ ಸಲ್ಲಿಸಲು ಎದ್ದು ನಿಂತು ಅವರ ಸೇವೆಗೆ ಸಿದ್ಧನೆಂದು ತೋರಿಸಿದ ಹಾಗೂ ಮುಂತಾದ ಹಲವೊಂದು ವಾರ್ತೆಗಳನ್ನು ಮದ್ರಾಸಿನ "ಫ್ರೀ ಪ್ರೆಸಿನ" ಪತ್ರಿಕೆಯಲ್ಲಿ ಅವೇ ಅವಧಾನಿಗಳು ಬರೆದಿರುತ್ತಾರೆ.

——

ತಾತ್ಕಾಲಿಕ ಸರಕಾರದ ಮಂತ್ರಿಗಳು

ತಾತ್ಕಾಲಿಕವಾದ ಕೇಂದ್ರ ಸರಕಾರದ ಮಂತ್ರಿಗಳಾಗಿ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರೂ, ರಾಜಕುಮಾರಿ ಅಮೃತ ಕೌರ್‌ರೂ, ಶ್ರೀ ಶರತ್ಚಂದ್ರ ಬೋಸರೂ ಅಲ್ಲದೆ ನಮ್ಮ ಶ್ರೀ ರಾಜಗೋಪಾಲಾಚಾರಿಯವರೂ ಮಂತ್ರಿಗಳಾಗಿ ಒಳಬಹುದೆಂಬ ಊಹಾಪೋಹೆಗಳ ವದಂತಿ ಗಾರಂಭವಾಗಿದೆ.

ಮದ್ರಾಸ್ ಮಂತ್ರಿ ಮಂಡಲದ ರಚನೆ

ನಿನ್ನೆ ಶ್ರೀ। ಪ್ರಕಾಶಂ ಅವರು ಮದ್ರಾಸ್ ಮಂತ್ರಿ ಮಂಡಲದ ೧೧ ಹೆಸರುಗಳನ್ನು ಮಾನ್ಯ ಗವರ್ನರರಿಗೆ ಒಪ್ಪಿಸಿರುವುದಾಗಿಯೂ ಅವರಲ್ಲಿ ಈ ಜಿಲ್ಲೆಯವರಾದ ಶ್ರೀ। ಕೆ. ಆರ್. ಕಾರಂತ ಎಂ ಎಲ್. ಎ. ಅವರ ಹೆಸರೂ ಇದೆ ಎಂಬುದಾಗಿಯೂ ಇನ್ನೆರಡು ಹೆಸರನ್ನು ಈ ದಿನ ಸೂಚಿಸುವುದಾಗಿಯೂ ರಾಜಪ್ರವಾಣವೇ ಮೊದಲಾದುವು ಈ ದಿನ ನಡೆಯುವುದಾಗಿಯೂ ಸುದ್ದಿ ಹರಡಿದೆ.

ಶ್ರೀ. ಭುಲ್ಲಾಭಾಯಿ ದೇಸಾಯಿಗಳಿಗೆ ಕಾಹಿಲೆ

ಕಳೆದ ೪ ತಿಂಗಳಿಂದ ಕಾಹಿಲೆಯಲ್ಲಿರುವ ವೀರಖಂಡ ಮಹನೀಯರ ಈಗಿನ ಸ್ಥಿತಿಯು ಚಿಂತಾಜನಕವಾಗಿದೆ.

ಮುಂದಿನ ರಾಷ್ಟ್ರಪತಿಗಳು ಪಂಡಿತ ನೆಹರು

ರಾಷ್ಟ್ರಪತಿ ಮೌಲಾನರು ಮುಂದಿನ ರಾಷ್ಟ್ರಪತಿಗಳ ಸ್ಥಾನಕ್ಕೆ ಪಂಡಿತ ಜವಾಹರಲಾಲ್ ನೆಹರೂ ಅವರ ಹೆಸರನ್ನು ಶಿಫಾರಸು ಮಾಡಿರುತ್ತಾರೆ.

ಉಪ್ಪಿನ ಸುಂಕದ ರದ್ದಿಯಾತಿಗಾಗಿ

ಉಪ್ಪಿನ ಸುಂಕದ ರದ್ದಿಯಾತಿನ ವಿಷಯದಲ್ಲಿ ಮಹಾತ್ಮಾ ಗಾಂಧಿಯವರೂ ಇಂಡಿಯಾ ಸರಕಾರದ ಅರ್ಥ ಸಚಿವರಾದ ಸರ್. ಏ. ರಾಮಸ್ವಾಮಿ ಅವರಿಗೂ ಮಾತುಕತೆಗಳಾಗಲೇ ನಡೆದಿವೆ. ಇದರ ಇತ್ಯರ್ಥ ಬೇಗನೇ ಆಗಲಿದೆ.

ಮಧುರೆಯಲ್ಲಿ ಬಸ್ ಕೆಲಸಗಾರರ ಮುಷ್ಕರ

ಮಧುರೆಯ ರಾಮ ವಿಲಾಸ ಬಸ್ ಸರ್ವಿಸಿನ ಆಡಳಿತೆಯ ಮೇಲೆ ಅತೃಪ್ತಿ ಹುಟ್ಟಿದ ಬಸ್ ಕೆಲಸಗಾರರು ಕೆಲಸಕ್ಕೆ ಹೋಗದೆ, ಮುಷ್ಕರ ಹೂಡಿ, ಪಿಕೆಟಿಂಗ್ ಮೊದಲಾದ ಕಾರ್ಯಕ್ರಮಗಳನ್ನು ಕೈಕೊಂಡರೆಂಬುದಲ್ಲಿ ಸುಮಾರು ೧೭೦ ಮಂದಿಗಳ ಕೈದಾಗಿ ವಿಚಾರಣೆ ನಡೆಯುತ್ತಿದೆ.

ಈ ಗಲಭೆಯ ಸಂಬಂಧ, ಒಂದು ಸಂದರ್ಭದಲ್ಲಿ ಪೋಲೀಸರು ಗಲಭೆ ನಡೆಸಿದವರ ಮೇಲೆ ಕಣ್ಣೀರು ಒರುವ ಹಬೆಯನ್ನು ಉಪಯೋಗಿಸಿರುವರೆಂದೂ ಸುದ್ದಿ.

ಡಾ। ಸುಶೀಲಾ ನಾಯರರಿಗೆ ಮದುವೆ

ಕಾಕಾ ಕಾಲೇಲ್ಕರರ ಮಗ ಶ್ರೀ। ಬಾಲಕೃಷ್ಣ ಕಾಲೇಲ್ಕರರಿಗೂ ಡಾ। ಸುಶೀಲಾ ನಾಯರರಿಗೂ ವಿವಾಹವೆ ನಿಶ್ಚಯವಾಗಿದೆ.

ಐ. ಸಿ. ಎಸ್. ಆಫೀಸರರಿಗೆ ೩ ವರ್ಷ ಸಜೆ

ಲಂಚ ತಿಂದ ಆರೋಪ

ಮಿಡ್ನಾಪುರದ ಮಾಜಿ ಎಡಿ। ಜಿಲ್ಲಾ ಮೆಜಿಸ್ಟ್ರೇಟರಾದ ಶ್ರೀ। ಟಿ. ಎ. ಮೆನೊನ್ ಐ. ಸಿ. ಎಸ್. ಅವರು, ಲಂಚ ತಿಂದ ಆರೋಪದ ಸಂಬಂಧ, ಆಲಿಪುರದ ಸ್ಪೆಶಲ್ ಟ್ರೈಬೂನಲಿನವರಿಂದ ೩ ವರ್ಷಗಳ ಕಠಿಣ ಸಜೆಗೂ ೩ ಸಾವಿರದ ಜುಲುಮಾನೆಗೂ ಗುರಿಯಾಗಿದಾರೆ. ಇದಕ್ಕೆ ಸಹಾಯಕರಾಗಿದ್ದರೆಂಬ ಅವರ ಪರ್ಸನಲ್ ಕ್ಲಾರ್ಕ್ ಶ್ರೀ. ಎನ್. ಸಿ. ಮೆನೊನ್ ಅವರಿಗೆ ರೂ. ೫೦೦ರ ಜುಲ್ಮಾನೆ ವಿಧಿಸಲಾಗಿದೆ.

——

ಭೂಮಾಲಿಕರ ಕಪ್ಪ ನಷ್ಟ —ಕುಂಬಳೆ

ಇಲ್ಲಿ ಮೊಕ್ಕಾಂ ಮಾಡಿದ್ದ ಜಿಲ್ಲಾ ಕಲೆಕ್ಟರರಾದ ಶ್ರೀ. ಕೆ. ರಾಮವರ್ಮ ರಾಜರು, ಕೆಲವಂದಿ ಸ್ಥಳೀಯ ಮಹನೀಯರನ್ನು ಕರೆಸಿ ಅರೂಪಗೊಂಡ ಎಲಿಪರಿ ಪ್ರದೇಶದೊಳಗಣ ತೋಟ ಮತ್ತು ಕಟ್ಟಡಗಳಿಗೆ ಪರಿಹಾರ ಧನ ಕೊಡುವದರದ ವಿಚಾರವಾಗಿ ಪರ್ಯಾಲೋಚಿಸಿದರು.

ಶ್ರೀಗಳಾದ ಐ ಸಿ ಭಂಡಾರಿ, ಕೆ. ರಾಮಕೃಷ್ಣ ಭಟ್, ಡಾ। ಎಂ ಪರಮೇಶ್ವರ ಭಟ್, ಕೆ ಈಶ್ವರ ಭಟ್, ಶಂಕರನಾರಾಯಣ ಪಾಠಾಳಿ, ಕೆ. ತಿಮ್ಮಣ್ಣ ಆಳ್ವ ಎಂ. ವೆಂಕಟ್ರಮಣ ಭಟ್ ಇತ್ಯಾದಿ ಮಹನೀಯರು ತಂತಮ್ಮ ಅಭಿಪ್ರಾಯಗಳನ್ನಿತ್ತರು.

ಸ್ಪೆಶಲ್ ಡಿ। ಕಲೆಕ್ಟರಾಗಿ ಇಂದು ತಾನೇ ಚಾರ್ಜು ವಹಿಸಿದ ಜನಾಬ್ ಎ. ಜಿ. ಖಾನ್ ಸಾಹೇಬರೂ ಶ್ರೀ। ಬಿ. ಜೂಗಪ್ಪನವರೂ ಮತ್ತು ಸ್ಪೆಶಲ್ ಡಿಪ್ಯುಟಿ ತಹಶೀಲ್ದಾರರೂ ಹಾಜರಿದ್ದರು.

——

USE
OUR GENUINE
EUCALYPTUS OIL
FOR ALL
ACHES & PAINS

FOR HEALTH
USE
SILVER KING
CASTOR OIL
LAKSHMI OIL MILLS,
COIMBATORE.

1945 A YEAR OF ALL ROUND PROGRESS

Completed New Business over		Rs.	20,30,000
Premiums, Interest &c.	,,	Rs.	3,05,000
Govt. & Trust Securities	,,	Rs.	4,25,000
Life Assurance Fund	,,	Rs.	6,30,000
Total Assets	,,	Rs.	7,50,000

Very low Expense Ratio
Reviewing the progress of the Company in 1945 Mr. D. Sesha Iyer, M. A., F. I. A., Actuary, writes:
"If the same policy as you have now been following is continued in future, I am sure the Company would be able to put up a good record at the next valuation."
A decisive Organisation Programme is now on Hand.
APPLICATIONS FOR SALARIED APPOINTMENT OF **Organisers** and for **Chief & Special Agencies** on commission basis are invited.
The Popular Insurance Company, Limited.
MANGALORE.

ದಿ ಸೌತ ಇಂಡಿಯಾ ಕೋ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್
ಪೋಸ್ಟ್ ಬೊಕ್ಸ್ 182, ಮದ್ರಾಸು
1945ರ ವ್ಯವಹಾರದ ಆಂಕೆ ಸಂಖ್ಯೆಗಳು:
ಪೂರ್ತಿಗೊಂಡ ಪ್ರೊಪೋಸಲ್‌ಗಳು ರೂ. 77,87,675.
ಪೂರ್ತಿಗೊಂಡ ಪಾಲಿಸಿಗಳು ರೂ. 66,82,345.
ರಿನ್ಯೂವಲ್ ಪ್ರೀಮಿನ ಪರಿಮಾಣ-ಸೇಕಡಾ 74
ಪ್ರಾತಿನಿಧ್ಯಗಳಿಗೆ ಅಜೆನ್ಸಿಗಳನ್ನು ಕರೆಯಲಾಗಿದೆ.
ಲಾಭಕರ ಶರ್ತಗಳು ಇವೆ.

ವಾರದ ಕಥೆ

ಟೊಪ್ಪಿಯ ಬೆಲೆ

ಜಯಮ್ಮ ಆಗ ತಾನೇ ಸ್ಕೂಲ್ ಫೈನಲ್ ಪರೀಕ್ಷೆ ಮಾಡಿಕೊಂಡು ಕೂತಿದ್ದಳು. ಬಡವರ ಮನೆ ಹುಡುಗಿ ಅವಳು; ಆದರೂ ಕೆಲವು ಮಂದಿ ಯುವಕರು ಇಷ್ಟರಲ್ಲೇ, ಇವಳ ಮದುವೆಯ ಪ್ರಸ್ತಾವವನ್ನು ಅವಳ ಹಿರಿಯರೊಡನೆ ಮಾಡದೆ ಇರಲಿಲ್ಲ. ಆದರೆ ಅವಳಿಗೆ ಇವರಲ್ಲಿ ಒಬ್ಬನೂ ಮೆಚ್ಚಿಕೆಯವನಿರಲಿಲ್ಲ. ಅವಳಿಗೆ ಮನಸ್ಸಿದ್ದದ್ದು ಅವನೊಬ್ಬನ ಮೇಲೆಯೇ—ಮೋಹನಚಂದ್ರನ ಮೇಲೆ. ಅವನೂ ಇವಳಂತೆಯೇ ಬಡವರ ಮನೆಯವ—ಪಾಪ.

ಜಯಮ್ಮ ತಾನೇನಾದರೂ ಒಂದು ಉದ್ಯೋಗಕ್ಕೆ ಸೇರಿಕೊಂಡು ದುಡಿಯಬೇಕು; ಸಂಪಾದಿಸಬೇಕು; ಅದರಲ್ಲಿ ಕೊಂಚ ದುಡ್ಡು ಉಳಿಸಿ—ಮೋಹನಚಂದ್ರನನ್ನು ಮುಂದಿನ ಓದಿಗೆ ಕಳುಹಿಸಬೇಕು ಎಂದು ಅವಳ ಯೋಚನೆ. ಅದಕ್ಕಾಗಿಯೇ, ಈ ಕೆಲವು ದಿನಗಳಿಂದ ಅವಳು ಒಂದು ನಿತ್ಯಪತ್ರಿಕೆಯನ್ನು ತಪ್ಪದೆ ತರಿಸಿಕೊಳ್ಳುತ್ತಿದ್ದಳು.

ಈ ದಿನ ಜಯಮ್ಮ, ತನ್ನ ಕೊಠಡಿಯಲ್ಲಿ ಏನೋ ಓದುತ್ತಿದ್ದ ಹಾಗೆ, ಪತ್ರಿಕೆ ಬಂತು. ಅವಳು ಅದನ್ನು ಬಿಡಿಸಿ ಜಾಹಿರಾತುಗಳನ್ನು—ಮುಖ್ಯವಾಗಿ "ಬೇಕು" ಎಂಬ ಪ್ರಕಟಣೆಗಳನ್ನು—ಒಂದೊಂದಾಗಿ ಬಹಳ ಜಾಗರೂಕತೆಯಿಂದ ಓದತೊಡಗಿದಳು. ಅದರಲ್ಲಿ ಒಂದು ಹೀಗಿತ್ತು:—

"ಬೇಕು—ಒಬ್ಬ ಮಹಿಳಾ ಕಾರ್ಯದರ್ಶಿ,—ಒಂದು ದೊಡ್ಡ ಪ್ರಸಿದ್ಧ ವ್ಯಾಪಾರಿ ಸಂಸ್ಥೆಯ ಮ್ಯಾನೇಜರರಿಗೆ. "ಎಕ್ಸ್", C/o ಜಯಂತ್ ಪತ್ರಿಕಾ.... ರೋಡ್...."

ಜಯ ಕೂಡಲೇ ಆ ವಿಳಾಸಕ್ಕೊಂದು ಅರ್ಜಿ ಬರೆದು ಹಾಕಿದಳು. ಮರುದಿನವೇ ಅದಕ್ಕೆ ಉತ್ತರವೂ ಬಂತು. ಉತ್ತರ ಏನಿತ್ತು:—

"ನಾಳೆ ಬೆಳಗ್ಗೆ ೧೧ಗೆ ಆಫೀಸಿಗೆ ಬಂದು ಮೇನೇಜರರಿಗೆ ಭೇಟಿಯಾಗುವಂತೆ ಅಪೇಕ್ಷಿಸಲಾಗಿದೆ—ಮೆನೇಜರ್."

ಜಯ ಆ ಪತ್ರದಂತೆ ಆ ಹೊತ್ತಿಗೆ ಸರಿಯಾಗಿ ಆ ಮೆನೇಜರರ ಆಫೀಸಿಗೆ ಹೋದಳು; ಮೆನೇಜರರ ಭೇಟಿಗಾಗಿ ಕಾದು ಕುಳಿತಳು.

ಜಯಮ್ಮನಿಗೀಗ ೧೮ನೆಯ ವರ್ಷ. ಅವಳು ನಸುಗಪ್ಪು; ಅವಳ ಮುಖಕ್ಕಿಂತ ಮೈಕಟ್ಟು ಚನ್ನೆಂದು ಕೆಲವರು ಹೇಳುತಿದ್ದರು. ಅವಳು ಈಗಿನ ಕೆಲವು ತರುಣಿಯರಂತೆ, "ಕೃತಕವಾದ ಅಲಂಕಾರ" ಸಾಮಗ್ರಿಗಳಿಂದ ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಡುವವಳಲ್ಲ. ಅದಿಲ್ಲದಿರುವುದೇ ಅವಳು ನೋಡುವುದಕ್ಕೆ ಲಕ್ಷಣವಾಗಿದ್ದಳು.

೧೨ ಗಂಟೆಗೆ ಮೆನೇಜರ್ ಬಂದು ಜಯಮ್ಮನಿಗೆ ಭೇಟಿ ಕೊಟ್ಟ. ಸುಮಾರು ½ ಗಂಟೆ ಮಾತಾಡಿ "ನೇಮಕದ ಅಪ್ಪಣೆ" ಬರೆಸಿ ಕೊಟ್ಟ. "ನಾಳೆ ಡ್ಯೂಟಿಗೆ ಸೇರಬಹುದು" ಎಂದ.

ಜಯಮ್ಮ ಸಂತೋಷದಿಂದ ಹಿಂದಿರುಗಿದಳು. "ಸ್ಕೂಲ್ ಫೈನಲ್" ಪಾಸಾದವರಿಗೆ ತಿಂಗಳಿಗೆ ಏಕಾಏಕಿ ರೂ ೧೨೫ರ ಸಂಬಳ, ೨೫ರ ಬತ್ತ ಬೇರೆ ಎಂದರೆ ಆಕೆಗೆ ಷ್ಟು ಸಂತೋಷವಾಗಬೇಡ? ಜಯನಿಗೆ ಅರ್ಧ ರಾಜ್ಯವೇ ಸಿಕ್ಕಿದಷ್ಟು ಸಂತೋಷವಾಯಿತು.

ದಾರಿಯಲ್ಲಿ ಬರುತ್ತ ಜಯನಿಗೆ ಅವಳ ಬಾಲ್ಯ ಗೆಳತಿಯಾದ ಕುಸುಮಳ ಭೇಟಿ ಅಕಸ್ಮಾತ್ತಾಗಿ ಆಯಿತು. ಜಯ ತನಗೆ ಈಗ ತಾನೇ ದೊರಕಿದ ಉದ್ಯೋಗದ ವಿಚಾರವನ್ನು ಕುಸುಮಳಿಗೆ ತಿಳಿಸಿದಳು.

ಕುಸುಮಳು ಈಕೆ ಹೋಗಿದ್ದ ಆಫೀಸ್ ಅಲ್ಲಿನ ಮೆನೇಜರನ ಹೆಸರು, ಕುಲಗೋತ್ರ, ಎಲ್ಲವನೂ ಜಯನಿಂದ ವಿಚಾರಿಸಿ ತಿಳಿದುಕೊಂಡು—"ಸರಿ; ಅದೇ ಆಫೀಸ್; ಅದೇ ಸ್ಟೀಮ್ ರೋಲರಿನಂಥ ಡೊಳ್ಳು ಹೊಟ್ಟೆ ಮೆನೇಜರ್; ಅವನೊಬ್ಬ ದೊಡ್ಡ ಕಳ್ಳ.... ಮಗ; ನೀನು ಮೋಸ ಹೋದೆ" ಎಂದಳು ಕುಸುಮ.

ಜಯ:—"ಅದೇಕೆ ಹಾಗೆನ್ನುತ್ತೀ? ಅಲ್ಲಿನ ವಿಚಾರವೇನಾದರೂ ನಿನಗೆ ತಿಳಿದಿದೆಯೇ?"

ಕುಸುಮ:—"ನನಗೇ ಎಂದೇನು? ಅನೇಕರಿಗೂ ಆ ಆಫೀಸಿನ ಗುಟ್ಟು ಆ ಮೆನೇಜರರ ಹಣೆಯ ಬರಹ ತಿಳಿದೇ ಇದೆ. ಅದೊಂದು ದೊಡ್ಡ ಕಥೆ. ಅವನಿಗೆ ಮದುವೆಯಾಗಿಲ್ಲ; "ಸೆಕಂಡ್ ಹ್ಯಾಂಡ್" ಬ್ರಹ್ಮಚಾರಿ. ಅಂಥ ಬ್ರಹ್ಮಚಾರಿಯಾದ್ದರಿಂದ ಅವನಿಗೆ "ಗಂಡು ಕಾರ್ಯದರ್ಶಿ"ಗಳು ಬೇಡ ಹೆಣ್ಣು ಕಾರ್ಯದರ್ಶಿಗಳೇ ಬೇಕು. ಅದೂ "ಕಾಯಂ ಕಾರ್ಯದರ್ಶಿ"ಗಳು ಅವನಿಗೆ ಒಗ್ಗದು. ತಿಂಗಳಿಗೊಬ್ಬಳು 'ಲೇಡೀ ಸೆಕ್ರಟರಿ"ಯಾಗಬೇಕು. ಅದಕ್ಕಾಗಿ ಅವನು ಪ್ರತಿ ತಿಂಗಳಲ್ಲಿಯೂ, "ಹಳೇ ಸೆಕ್ರಟರಿ"ಯನ್ನು, ಯಾವ ನೆವದಿಂದಾದರೂ, ಕಾಡಿಸಿ ಪೀಡಿಸಿ-ಓಡಿಸಿ, ಅದರೊಡನೆ ಹೊಸ "ಮಹಿಳಾ ಕಾರ್ಯದರ್ಶಿ"ಗಾಗಿ ಪೇಪರುಗಳಲ್ಲಿ "ವಾಂಟೆಡ್" ನೋಟೀಸು ಪ್ರಕಟಿಸುತ್ತಾನೆ. ತಿಂಗಳಿಗೊಬ್ಬೊಬ್ಬಳನ್ನು ಅರಿಸಿ, ಅವಳು ಚಿಕ್ಕ ವಯಸ್ಸಿನವಳೂ ಸ್ವರೂಪಿಯೂ ಆಗಿರಬೇಕು; ಅದೇ ಕಾರ್ಯದರ್ಶಿನಿ ಸ್ಥಾನಕ್ಕೆ ಇರಬೇಕಾದ ಮುಖ್ಯ ಯೋಗ್ಯತೆ—ಅವಳಿಗೆ ಸೆಕ್ರಟರಿ ಕೆಲಸ ಕೊಡುತ್ತಾನೆ. ಒಳ್ಳೆ ಸಂಬಳದ ಆಸೆ ತೋರಿಸುತ್ತಾನೆ. ಇದನ್ನು ನಂಬಿಕೊಂಡು ನಾನೂ ನಿನ್ನಂತೆ ಅರ್ಜಿ ಹಾಕಿದ್ದೆ; ಅವನ ಭೇಟಿ ಮಾಡಿದ್ದೆ. ಕೆಲಸವೂ ಸಿಕ್ಕಿತು. ದೊಡ್ಡ ಸಂಬಳದ ಗಂಟೂ ಎದುರಿಗೆ ಬಂದು ಕುಣಿದಾಡಿತ್ತು—(But)(ಆದರೆ).....

ಜಯ:—ಅದೆಂಥ "ಬಟ್ಟು"? ಒಬ್ಬಟ್ಟೆ, ಹೆಬ್ಬೆಟ್ಟೆ, ಕರಿಬಟ್ಟೆ?

ಕುಸುಮ:—ಅದು ಯಾವ "ಬಟ್ಟೂ" ಅಲ್ಲ. ಈ "But"ನ ಪ್ರಕರಣವೇ ಬೇರೆ. ಅದನ್ನು ನಾನು ನಿನಗೆ ವಿವರಿಸುತ್ತೇನೆ. ನೀನು ಅದನ್ನು ಚೆನ್ನಾಗಿ ಕೇಳಿ, ಆಲೋಚಿಸಿ, ಮುಂದೇನು ಮಾಡಬೇಕೆಂದು ನಿರ್ಧರಿಸಿಕೋ. ನೋಡು! ನಾನು ಮೆನೇಜರನ ಅಪ್ಪಣೆಯಂತೆ, ನನ್ನ ಕಾರ್ಯದರ್ಶಿನಿ ಡ್ಯೂಟಿಗೆ ಹೋಗಿ ಕ್ರಮ ಪ್ರಕಾರ ಜೊತೆ ನಾ ಆದೆ. ಆ ದಿನದ ಅಷ್ಟಿಷ್ಟು ಕೆಲಸ ಮುಗಿಸಿದೆ. ಸಂಜೆ ಮನೆಗೆ ಮರುಳುವಾಗ ಗೇಟಿನಲ್ಲಿ ಕಾವಲುಗಾರ ನಿಂತಿದ್ದವನು, ಹಾಗೇ ನನ್ನನ್ನು ನೋಡಿ ನಕ್ಕ. ಅದು ಅರ್ಥಪೂರ್ಣವಾದ ನಗೆಯಾಗಿರುವಂತೆ, ನನಗೆ ಭಾಸವಾಯಿತು. ಆದರೂ ಆ ಕುರಿತು ನಾನು ವಿಚಾರಿಸಹೋಗದೆ ಮನೆಗೆ ಬಂದೆ. ಮರುದಿನ ತಿರುಗಿ ಆಫೀಸಿಗೆ ಹೋದೆ. ಸಂಜೆ ೫ ಗಂಟೆಗೆ ಹೊರಡುವಾಗ, ಮೆನೇಜರರು ನನ್ನನ್ನು ಕರೆಸಿದರು, ನಾನು ಹೋದೆ. ಅವರು ಮೆಲ್ಲಗೆ ನನ್ನೊಡನೆ "ನೋಡಿ, ನೀವು ನನ್ನ ಸೆಕ್ರಟರಿ ಎಂದಾದರೂ ನಿಮಗೆ ಸೆಕ್ರಟರಿ ಮಾಡತಕ್ಕ ಕೆಲಸವೇನೂ ಇರುವುದಿಲ್ಲ. ಆದ್ದರಿಂದ ನೀವು ನನ್ನ ಪಬ್ಲಿಕ್ ಆಫೀಸಿಗೆ ನಿತ್ಯವೂ ೧೧ ಗಂಟೆಗೆ ಬರಬೇಕಾಗಿಲ್ಲ. ಅದಕ್ಕೆ ಬದಲು ನಾಳೆಯಿಂದ ಸಂಜೆ ೬ಕ್ಕೆ "ನನ್ನ ಪ್ರೈವೇಟ್ ರೂಮಿಗೆ" ಬಂದರಾಯ್ತು. ನೀವು ನನ್ನ ಗೇಟಿನ ಕಾವಲುಗಾರನೊಡನೆ ಹೇಳಿದ ಪಕ್ಷದಲ್ಲಿ ಅವನು ನಿಮ್ಮನ್ನು ನನ್ನ "ಪ್ರೈವೇಟ್ ರೂಮ್"ಗೆ ಕರೆದು ತಂದು ಬಿಡುವನು, ತಿಳಿಯಿತೆ?" ಎಂದರು.

"ಹಿಂದಿನ ಸಂಜೆ ಆ ಕಾವಲುಗಾರ ಅರ್ಥವತ್ತಾಗಿ ನಕ್ಕದ್ದೂ ಇಂದು ಸಂಜೆ ಮೆನೇಜರರು ನಿತ್ಯವೂ ಸಂಜೆ ೬ ಗಂಟೆಗೆ ತಮ್ಮ ಪ್ರೈವೇಟ್ ರೂಮಿಗೆ, ಬರುವಂತೆ ಅಪ್ಪಣೆ ಮಾಡಿದ್ದೂ ಎರಡೂ ಒಂದಕ್ಕೊಂದು—ಇಡ್ಲಿ ಚಟ್ನಿಯಂತೆ-ಹೊಂದಿಕೆಯ-ದ ಹಾಗೆ ನನಗೆ ತೋರಿತು. ನಾನು ಮಾತಾಡದೆ ಬಂದು ಬಿಟ್ಟೆ.

ನಾನು ಮನೆಗೆ ಮರುಳುವಾಗ ಗೇಟಿನಲ್ಲಿ ಅದೇ ಕಾವಲುಗಾರ! ಅವನು ನನ್ನನು ಕಂಡೊಡನೆಯೇ "ಆಮ್ಮನವರು ಇನ್ನೀ

PRICE PER PHIAL RS. 1-4-0
Sole Distributors for Bombay Presidency. S. Kanara & Malabar;
TARANATH,
374, Lamington Road. Bombay7
Available everywhere.

ಬೊರಾಟಾಲ್ಕ

ನಿರ್ದೋಷ ಚರ್ಮಕ್ಕೆ ವೈದ್ಯರ ಸಲಹೆ

ಬೊರಾಟಾಲ್ಕನ ತಯಾರಿಕೆಯಲ್ಲಿ ಉಪಯೋಗಿಸುತ್ತಿರುವ ಹಲವಾರು ದ್ರವ್ಯಗಳ ಔಷಧದ ಗುಣಗಳಿಂದ ಅದು ಚರ್ಮವನ್ನು ಕಾಂತಿಯುಕ್ತವಾಗಿ ಮಾಡುವಲ್ಲಿ ಆದರ್ಶಪ್ರಾಯವಾದ ಶೃಂಗಾರ ಸಾಮಗ್ರಿಯಾಗಿರುತ್ತದೆ. ಮೃದು ಚರ್ಮಕ್ಕೆ ಸುರಕ್ಷಿತವೆಂದು ಶಿಫಾರಸು ಮಾಡಲಾಗಿದೆ.

ಏಜಂಟರು:—

ವಿ: ಸಿ. ರಾಮಲಿಂಗಂ ಎಂಡ್ ಸನ್ಸ್,

2/422 ಪಿಂಟ್ ಸ್ಟ್ರೀಟ್, ಮದ್ರಾಸು.

ತಯಾರಕರು:—

ನೇಶನಲ್ ಟ್ರೇಡಿಂಗ್ ಕೊ., ಬೊಂಬಯಿ.

ಆಫೀಸಿಗೆ ಬರಲಾರಿರಿ ಅಲ್ಲವೆ?" ಎಂದು ಕೇಳಿದ.

ನಾನು:–"ಯಾಕೆ ಹಾಗೆ ಅನ್ನುತ್ತೀ?"

ಕಾವಲು:–"ಅಲ್ಲವಮ್ಮಾ! ನಿಮ್ಮನ್ನು ನೋಡುವಾಗ ನೀವು ಮರ್ಯಾದಸ್ಥ ಕುಟುಂಬಕ್ಕೆ ಸೇರಿದವರಂತೆ ತೋರುತ್ತೀರಿ. ಅಂಥವರು ಈ ಆಫೀಸಿನಲ್ಲಿ ಬಾಳಿಕೆ ಬಂದದ್ದಿಲ್ಲ; ಆದ್ದರಿಂದ, ಕುರಿತಾಗಿ ಹಾಗೆ ಕೇಳಿದೆ. ನಾನು ಇಲ್ಲಿಗೆ ಕಾವಲ್ಗುಗಾರನಾಗಿ ನೇಮಕ ಹೊಂದಿದ ಮೇಲೆ, ಇಂಥ ಕಾರ್ಯದರ್ಶಿನಿಯರು ಬಂದೆದ್ದು ಹೋದದ್ದು ಅವರ ಜಮಾ ಖರ್ಚು ಹತ್ತಿಪ್ಪತ್ತಾಯಿತು. ನಿಮ್ಮಂತೆ ಇಲ್ಲಿಗೆ ಬಂದ ಚಿಕ್ಕ ವಯಸ್ಸಿನ ಸುರೂಪಿಗಳಾದ ಎಲ್ಲ ಹೆಣ್ಣು ಮಕ್ಕಳೂ ಕಾರ್ಯದರ್ಶಿಗಳಾಗಿ ಈ ಆಫೀಸ್ ಹೊಕ್ಕ ೩–೪ ದಿನಗಳಲ್ಲೇ ಹೇಳದೆ ಕೇಳದೆ ಹೊರಟು ಹೋದದ್ದುಂಟು. ಮಧ್ಯ ವಯಸ್ಸಿನ ಕೆಲವರು–ಅದೂ ನಮ್ಮ ಮೆನೇಜರರಂಥ ಬ್ರಹ್ಮಚಾರಿಗಳ ಬಳಿ ಸರ್ವೀಸ್ ಮಾಡಿ ತರಬೇತಾದವರು, ಅನುಭವ ಪಡೆದ ವರು ಮಾತ್ರ,–ಇಲ್ಲಿ ತಿಂಗಳೋ ತಿಂಗಳೂ ವರೆಯೋ ಕಾರ್ಯದರ್ಶಿಗಳಾಗಿ ಬಾಳಿಕೆ ಬಂದಿದ್ದರೂ, ನಮ್ಮ ಮೆನೇಜರ್‌ರೇ ಅವರ ವಿಷಯದಲ್ಲಿ ಅತ್ಯಾಸ್ತಿ ಸೂಚಿಸಿ ಅವರನ್ನು ಹೊರಗೆ ತಳ್ಳಿದ ದೃಷ್ಟಾಂತು....."

"ಅವನು ಮಾತು ಅರ್ಧದಲ್ಲಿ ಇರುವಾಗಲೇ, ನಾನು "ಒಳ್ಳೆಯದಯ್ಯ!" ಎನ್ನುತ್ತ ಹೊರಟು ಬಂದೆ. ಮತ್ತೆ ಆ ಕಾವಲುಗಾರ ಹೇಳಿದಂತೆ "ಆ ಆಫೀಸಿಗೆ ತಿರುಗಿ ಹೋಗಲಿಲ್ಲ."

"ಈಗ ಜಯ, ನೀನೇನು ಮಾಡುವೆ? ಹೇಳು?"

ಜಯ:–"ಹಾಗಾದರೆ,ನಾಡಿದ್ದು ಬೆಳಗ್ಗೆ ೫ ಮಿನಿಟಿನ ಮಾತಿಗೆ ನೀನು ನಮ್ಮ ಮನೆಗೆ ಬಾ. ಎಲ್ಲವನ್ನೂ ಹೇಳುತ್ತೇನೆ."

ಕುಸುಮ ಹೊರಟು ಹೋದಳು ಜಯಮ್ಮ ಆಫೀಸಿಗೆ ೧೧ ಗಂಟೆಗೆ ಸರಿಯಾಗಿ ಬಂದು ತಲುಪಿದಳು. ಆ ದಿನದ ಕೆಲಸವನ್ನು ಹೆಸರಿಗೆ ಪೂರ್ತಿ ಕೊಟ್ಟರುವುದಷ್ಟನ್ನು ಮಾಡಿದಳು. ಅನಂತರ ೫ ಗಂಟೆಗೆ, ಆಕೆ ಮನೆಗೆ ಹೊರಡುವಾಗ, ಬಂತು ಕರೆ ಮೆನೇಜರರಿಂದ. ಮೆನೇಜರರು ಕುಸುಮಳಿಗೆ ಹೇಳಿದಂತೆಯೇ ಇವಳಿಗೂ ಹೇಳಿದರು. ಜಯ ಸುಮ್ಮನೆ ನಕ್ಕು ಹೊರಟು ಹೋದಳು.

ಮರುದಿನ ಜಯಮ್ಮ ಯಥಾ ಪ್ರಕಾರ ೧೧ ಗಂಟೆಗೆ ಬರಲಿಲ್ಲ—ಆಫೀಸಿಗೆ. ಸಂಜೆ ೬ ಗಂಟೆಗೆ ಬಂದು ಕಾವಲುಗಾರನನ್ನು ಕೂಗಿದಳು. "ಪ್ರೈವೇಟ್ ರೂಂ ಮೆನೇಜರರದು ಎಲ್ಲಿ?" ಎಂದು ಕೇಳಿದಳು.

ಕಾವಲುಗಾರ ಜಯನನ್ನು ತಂದು ಮೆನೇಜರರ "ಪ್ರೈವೇಟ್ ರೂಂ"ನಲ್ಲಿ ಬಿಟ್ಟು ಹೊರಟು ಹೋದ. "ಈ ಹುಡುಗಿಯ ಬುದ್ಧಿ ಹೀಗೇಕಾಗಿದೆ? ಈ ಹುಡುಗಿ ಇನ್ನೂ ಚಿಕ್ಕವಳು; ಇವಳನ್ನು ಯೋಗ್ಯರಾರೂ ಮದುವೆ ಮಾಡಿಕೊಂಡಾರು? ಆದರೂ ಇವಳೇಕೆ ನನ್ನ ಸಾಹೇಬರ ಬಲೆಯಲ್ಲಿ ಸಿಕ್ಕಿಬಿದ್ದಳೋ ಅದೇನು ಅವಳ ಗ್ರಹಚಾರವೋ"ಎಂದು ತನ್ನಲ್ಲೇ ಆಶ್ಚರ್ಯ ಪಡುತ್ತಿದ್ದ.

ಮೆನೇಜರರು ವಿಲಾಸವಾಗಿದ್ದ ತನ್ನ "ಪ್ರೈವೇಟ್ ರೂಂ"ನಲ್ಲಿ "ಪ್ರೈವೇಟ್ ಡ್ರೆಸ್ಸಿ"ನಲ್ಲಿ "ಈಜಿ ಚೆಯರಿ"ನಲ್ಲಿ ಬಿದ್ದು ಕೊಂಡು "ಸಿಗರೇಟ್" ಸೇದುತ್ತಿದ್ದರು. ಜಯನನ್ನು ಕಂಡರೋ ಇಲ್ಲವೋ—ಅವಳನ್ನು ಆನಂದದಿಂದ ಸ್ವಾಗತಿಸಿದರು. ಅವಳಿಗಾಗಿ ಒಂದು ಕುರ್ಚಿಯನ್ನು ತಾನೇ ಸರಿಸಿ ಕುಳ್ಳಿರ ಹೇಳಿದರು. "ನಾನು ಈ ಸಂಸ್ಥೆಯ ಮೆನೇಜರನಷ್ಟೇ ಅಲ್ಲ, ಪಾರ್ಟನರ್ ಕೂಡ ಹೌದೆಂಬುದು ತಿಳಿದಿದೆಯೆ?"

ಜಯ:—"ಇಲ್ಲ."

ಮೆನೇಜರ್:—"ಅದೇನೇ ಇದ್ದರೂ ಅದೆಲ್ಲ ಆಫೀಸಿನಲ್ಲಿ, ಅಷ್ಟೇ. ನಮ್ಮ ಖಾಸಗಿ ವ್ಯವಹಾರದಲ್ಲಿ "ಯಜಮಾನ—ನೌಕರ" ನೆಂಬ ಭೇದವಿಲ್ಲ. ನೀವು ಸುಮ್ಮನೇ ೧೧ ರಿಂದ ೫ರ ವರೆಗೆ ಆಫೀಸಿನಲ್ಲಿ ಕೊಳೆಯುವ ಬದಲು, ಈ ಕೊಟಡಿಯಲ್ಲಿ ೬ರಿಂದ ೧೦ರ ವರೆಗಿದ್ದರೆ ಸಾಕು."

ಜಯ:—"ನಾನು ಬಡವಳು ಮನೆಗೆ ಸೇರಿದವಳು. ಹಾಗೆ, ಪಬ್ಲಿಕ್ ಆಫೀಸಿಗೆ ಬಂದು ಹೋಗಬಹುದಾದ ಒಂದೆರಡು ಸಾಮಾನ್ಯ ಸೀರೆ—ಕುಪ್ಪಸಗಳು ಮಾತ್ರ ನನ್ನ ಬಳಿ ಇವೆ. ನಾನು ೬ರಿಂದ ೧೦ರ ವರೆಗೆ ಈ "ರೂಮಿ"ನಲ್ಲಿ ಪ್ರೈವೇಟ್ ಆಗಿ ಇರಬೇಕಾದರೆ, "ಈವ್ನಿಂಗ್ ಡ್ರೆಸ್" ಒಂದು ಬೇಕೇ ಬೇಕು. ಅದು "ಡೀಸೆಂಟ್" ಆಗಿರಬೇಕು. ಅದಕ್ಕೆ ತಕ್ಕ ಸ್ನೋ—ಪೌಡರ್, ಎಲ್ಲ ಅಪ್—ಟು—ಡೇಟ್ ಶೃಂಗಾರ ಸಾಮಗ್ರಿಗಳೂ ಅಗತ್ಯ ಬೇಕು. ಅದಕ್ಕೆಲ್ಲ ಈಗ ನನ್ನಲ್ಲಿ ದುಡ್ಡಿಲ್ಲ. ತಿಂಗಳ ಸಂಬಳ ಕೈಗೆ ಸಿಕ್ಕಿದ ಮೇಲೆ ಆ ಡ್ರೆಸ್ ಮಾಡಿಸಿಕೊಂಡು ಆ ಶೃಂಗಾರ ಮಾಡಿಕೊಂಡು ಅನಂತರ ಇಲ್ಲಿಗೆ ಬಂದರೆ ಸಾಲದೆ?

ಮೆನೇ:—"ದುಡ್ಡಿಗೆ ಯಾತಕ್ಕರಿ ನಿಮಗೆ ಯೋಚನೆ? ನೀವು ಕೇಳುವುದೊಂದೇ ತಡ–ಸಾವಿರಾರು ರೂಪಾಯಿಗಳನ್ನಾದರೂ ಬರೇ ಮಾತಿನ ಮೇಲೇ ಕೊಡುವಷ್ಟು ವಿಶ್ವಾಸವೂ ನನಗೆ ನಿಮ್ಮ ಮೇಲೆ ಉಂಟಾಗಿ ಹೋಗಿದೆ."

ಜಯ:—"ನಿಜವಾಗಿ—ಅಷ್ಟು ವಿಶ್ವಾಸ–ನನ್ನ ಮೇಲೆ?"

ಮೆನೇಜರರು ನಗುತ್ತ ಈಜಿ ಚೆಯರಿನಿಂದ ಸೋಫಾಕ್ಕೆ ಹೋಗಿ ಕುಳಿತರು. "ನೀವೂ ಈ ಸೋಫಾದ ಮೇಲೆ,ನನ್ನ ಪಕ್ಕದಲ್ಲೇ ಬಂದು ಕೂಡಬಹುದು. ನಮ್ಮ ಖಾಸಗಿ ವ್ಯವಹಾರದಲ್ಲಿ ಒಮ್ಮೊಮ್ಮೆ ಯಜಮಾನನೇ ನವುಕರನೂ ನವುಕರನೇ ಯಜಮಾನನೂ ಆಗುವುದುಂಟು!" ಎಂದು ಹೇಳುತ್ತ "ಹೀಗೆ ಬರಬಹುದು; ದಾಕ್ಷಿಣ್ಯ ಬೇಡ; ನಾನೇನೂ ನಿಮಗೆ ಇನ್ನು ಪರಕೀಯನಲ್ಲ" ಎಂದರು

ಜಯಮ್ಮ, ಸೋಫಾದ ಒಂದು ಮೂಲೆಯಲ್ಲಿ ಹೋಗಿ ಕುಳಿತಳು. ಮುಖ ತಗ್ಗಿಸಿ ಮೆಲ್ಲಮೆಲ್ಲನೆ:—"ನನಗೆ ಡ್ರೆಸ್ಸಿನ ಅಲಂಕಾರಗಳ ಮಟ್ಟಿಗಾದರೂ ತಾವು, ನನ್ನ ಮೇಲಿನ ಪರಮವಿಶ್ವಾಸದಿಂದ,"ಎಡ್ವಾನ್ಸ್ ಪೇ"(ಮುಂಗಡದ ಸಂಬಳ)ನಾಲ್ಕಾರು ತಿಂಗಳದ್ದು ಕೊಟ್ಟು ಸಹಾಯ ಮಾಡಬಹುದೆನ್ನುವ ಆದರೆ ಅದಲ್ಲ ನನ್ನ ವ್ಯಥೆ—ನಮ್ಮ ಮನೆಯವರಿಗೆ ೧ ಸಾವಿರದ ಸಾಲವಿದೆ. ಸಾಲದವರ ತಗಾದೆ ಜೋರಾಗಿದೆ. ಒಡ್ಡಿ ಸೇರಿ ಈಗ ಅದು ೧೫೦೦ ಆಗಿದೆ. ಅದರ ನಿವೃತ್ತಿ, ಹೇಗೋ ದೇವರೇ ಬಲ್ಲ" ಎಂದು ನಿಟ್ಟುಸಿರು ಬಿಡುತ್ತ ನುಡಿದಳು. "ಅದರಿಂದ ನನ್ನ ತಲೆಯೇ ಕೆಟ್ಟಿದೆ. ಯಾವುದಕ್ಕೂ ಬುದ್ಧಿ ಓಡದು" ಎಂದಳು.

ಮೆನೇ:—"ಅಷ್ಟೇ ತಾನೇ? ಅದೇನು ದೊಡ್ಡದು? ರೂ. ೧೫೦೦—ಸಾಲಕ್ಕೆ; ಮತ್ತೆ ೫೦೦, ನಿಮ್ಮ ಖರ್ಚಿಗೆ, ಈವ್ನಿಂಗ್ ಡ್ರೆಸ್ಸಿಗೆ ಅಲಂಕಾರ ಸಾಮಗ್ರಿಗಳಿಗೆ–ಈಗಲೇ ಸ್ಯಾಂಕ್ಷನ್ ಮಾಡಿದ್ದೇನೆ! ಸ್ವಲ್ಪ ಹೀಗೆ—ಸಮೀಪಕ್ಕೆ ಬನ್ನಿ. ನನ್ನ ಆ ಜೇಬಿನಲ್ಲಿ ಟ್ರೆಜರಿ ಬೀಗದ ಕೈಯಿದೆ ದಯವಿಟ್ಟು ಈಚೆಗೆ ತೆಗೆದು ಕೊಡಿ."

ಜಯ:–"ನಿಜವಾಗಿ–ಅಷ್ಟು–ವಿಶ್ವಾಸ–ನನ್ನ ಮೇಲೆ?" ಎನ್ನುತ್ತ ಗೂಟಕ್ಕೆ ತಗಲಹಾಕಿದ್ದ ಮೆನೇಜರರ ಕೋಟಿನ ಜೇಬಿನಿಂದ ಬೀಗದ ಕೈಯನ್ನು ತೆಗೆದು ಅವರ ಕೈಯಲ್ಲಿಟ್ಟಳು. ಸ್ವಲ್ಪ ನಗುತ್ತ, ಸ್ವಲ್ಪ ಒಲುವು ಒಯ್ಯಾರವನ್ನು ಬೀರುತ್ತ ಮೆನೇಜರರ ಮೈಗೆ ತಗಲುವಂತೆ ಸೆರಗಿನ ತುದಿಯನ್ನು ಸವರಿಸಿಕೊಳ್ಳುತ್ತ, ಜಯ ಆ ಕೆಲಸವನ್ನು ಯಶಸ್ವಿಯಾಗಿ ಪೂರೈಸಿದಳು; ಬೀಗದ ಕೈಯನ್ನು ಕೊಡುವಾಗ, ಕೈಗೆ ಕೈ ತಗಲುವ ಆ ದೃಶ್ಯವನ್ನಂತೂ,—ಮೆನೇಜರರಿಗೆ ರೋಮಾಂಚನವಾಗುವ ರೀತಿಯಲ್ಲಿಯೇ–ಅವಳು ಅಷ್ಟು ಚಾತುರ್ಯದಿಂದ ಅಭಿನೈಸಿ ಬಿಟ್ಟಳು!

ಮೆನೇಜರ್ ಬೀಗದ ಕೈಯಿಂದ ಟ್ರೆಜರಿ ಬಾಗಿಲು ತೆಗೆದು ೨ ಸಾವಿರದ ನೋಟುಗಳನ್ನು ಜಯನ ಕೈಗೊಪ್ಪಿಸಿದ. "ನಿಮ್ಮನ್ನೇ ನಂಬಿದ್ದೇನೆ" ಎಂದು, ತನ್ನ ಡೊಳ್ಳು ಹೊಟ್ಟೆಯು ಅಲುಗಾಡುವಂತೆ ನಕ್ಕ.

"ಹಾಗಾದರೆ ನಾನಿಂದು ಈಗಲೇ ಮನೆಗೆ ಹೋಗಿ, ಈ ಹಣದ ವ್ಯವಸ್ಥೆ ಮಾಡುತ್ತೇನೆ. ಈ ಆಪತ್ಕಾಲದಲ್ಲಿ ತಾವು ಹೀಗೆ ಸಹಾಯ ಮಾಡಿದ ಹಣ ಧರ್ಮಕ್ಕೇ ಕೊಟ್ಟ ಹಾಗಾಯಿತು. ನಾಳೆ ಸಂಜೆ ೬ಕ್ಕೆ ...."ಎಂದಳು ಜಯ ನಗುತ್ತ.

"ಸರಿ: ನಾಳೆ ೬ಕ್ಕೆ ತಪ್ಪದೆ ಬನ್ನಿ. ನಿಮ್ಮನ್ನೇ ಕಾದಿರುತ್ತೇನೆ."

ಜಯ ಅಲ್ಲಿಂದ ಹೊರಟಳು. ಮರು ದಿನ ಬೆಳಗ್ಗೆ ಕುಸುಮಳೂ ಬಂದಳು. ಜಯ ತಾನು ಹೇಗೆ ಮೆನೇಜರನಿಗೆ ಮುಂಕು ಬೂದಿ ಹಾಕಿ ನೋಟು ಚೀಟ್ಲದೆ ೨ ಸಾವಿರ ಹೊಡೆದುಕೊಂಡು ಬಂದೆನೆಂದೂ ಅದರಲ್ಲಿ ತಮ್ಮುಲಗ್ನಕ್ಕೆ ತನ್ನ ಗಂಡನ ಮುಂದಿನ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ಹಣವನ್ನು ಎಂಗಡಿಸಿಟ್ಟಿದ್ದೇನೆಂದೂ, ಮೋಹನ ಚಂದ್ರನನ್ನು ಈಗಲೇ ಬರಮಾಡುತ್ತೇನೆಂದೂ ತಿಳಿಸಿದಳು.—

ಕುಸುಮ ಆಶ್ಚರ್ಯದಿಂದ "ನೀನು ಇಷ್ಟು ಜಾಣತನದ ಉಪಾಯ ಮಾಡುವೆಯೆಂದು ತಿಳಿದಿರಲಿಲ್ಲ ನನಗೆ. ಇನ್ನು ನಿಮ್ಮ ಮೆನೇಜರನು ಯಾವ ಹುಡುಗಿಯರನ್ನೂ ಈ ಜನ್ಮದಲ್ಲಿ ನಂಬಲಾರ. ೨ ಸಾವಿರದ ಒಳ್ಳೇ ಟೋಪಿ ಅವನಿಗೆ ಹಾಕಿದೆ" ಎಂದಳು

ಅದೇ ಸಂಜೆ ಮೆನೇಜರ್ ಜಯನನ್ನು ೬ ಗಂಟೆಗೆ ಕಾದು ಕುಳಿತಿದ್ದ ಹಾಗೆ ಯಾರೋ ಒಬ್ಬ ಒಂದು ಲಕ್ಕೋಟೆ ತಂದು ಅವನಿಗೆ ಕೊಟ್ಟ ಅದು "ಮೋಹನಚಂದ್ರ—ಜಯ"ನ ಲಗ್ನ ಪತ್ರಿಕೆ!

PREMIER LIFE & GENERAL INSURANCE Co., LTD.
Madras.
Invites applications from capable Insurance Organisers preferably those in the line with a ready organization to take up the Chief Agency for Motor car Insurance Business on most attractive terms. Best opportunity for right type of persons in view of the Motor car Insurance against third party risk being made compulsory.

ಮಕ್ಕಳಿಗೆ
ಡೋಂಗರೆ ಬಾಲಾಮೃತವು
ಆದರ್ಶಕವಾದ ಪೌಷ್ಟಿಕ. ಇದು ಮಧುರವಾಗಿದೆ.

ಕೀರ್ತಿಶೇಷ ಶ್ರೀನಿವಾಸ ಶಾಸ್ತ್ರಿಗಳು

(೨ನೇ ಪುಟದಿಂದ)

ವ್ಯವಸ್ಥೆಯ ಭವಿತವ್ಯದ ಕುರಿತು ನಡೆಸಿದ ಮಾತುಕತೆಗಳು ಘನಗಂಭೀರವಿರುತ್ತವೆ. ಆದಾಗ್ಯೂ ಸುಧಾರಣೆಗಳನ್ನು ನಿರೂಪಿಸುವ ಕಾರ್ಯಭಾಗದಲ್ಲಿ "ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿ"ಯವರು ಒಂದು ವಿಧವಾದ ವಿಚಿತ್ರ ಮನೋವೈಷಮ್ಯವನ್ನು ಅವರ ಮೇಲೆ ತಳೆದುದರಿಂದ ಅದರಲ್ಲಿ ಶಾಸ್ತ್ರಿಗಳನ್ನು ಸಹಕರಿಸುವಂತೆ ಅವರನ್ನು ಕೇಳಿಕೊಳ್ಳಲಿಲ್ಲ.

ದ. ಆಫ್ರಿಕದಲ್ಲಿ ಹಿಂದೀಯರ ರಕ್ಷಕ

೧೯೨೬ರಲ್ಲಿ, ಆಫ್ರಿಕದ ಹಿಂದೀ ವಸಾಹತುಗಾರರ ಮೇಲೆ ಹೊರಿಸಿದ ನಿರ್ಬಂಧಗಳನ್ನು ರದ್ದು ಮಾಡುವ ಒಂದು ಒಪ್ಪಂದಕ್ಕೆ ಬರುವ ಉದ್ದೇಶವಿಟ್ಟುಕೊಂಡು, ಯೂನಿಯನ್ ಗವರ್ನ್‌ಮೆಂಟಿನೊಡನೆ ಸಂಧಾನ ಹೂಡಲು, ಮಾನ್ಯ ಶಾಸ್ತ್ರಿಗಳು ಒಂದು ಕಮಿಶನಿನ ಸದಸ್ಯರಾಗಿ ದ. ಆಫ್ರಿಕಕ್ಕೆ ತೆರಳಿದರು. ಆ ಸಂಧಾನ ಕಾರ್ಯವು ಯಶಸ್ವಿಯಾಯಿತು. ಪರಿಣಾಮವಾಗಿ ದ. ಆಫ್ರಿಕದಲ್ಲಿ ಭಾರತದ ಏಜಂಟ ಜನರಲರಾಗಿ ಮಾನ್ಯ ಶಾಸ್ತ್ರಿಗಳು ಆರಿಸಲ್ಪಟ್ಟರು. ಆ ಸ್ಥಾನಕ್ಕೆ ಮಾನ್ಯ ಶಾಸ್ತ್ರಿಗಳೇ ಯೋಗ್ಯರೆಂದು ಹಿಂದುಸ್ಥಾನದ ಜನತೆಯ ಪರವಾಗಿ ಗಾಂಧೀಜಿಯರು ವೈಸರಾಯರಿಗೆ ಸೂಚಿಸಿದ್ದರು ತಾನು ನಡೆಸಿದ ರಹಸ್ಯ ಮಾತುಕಥೆಗಳ ಹಾಗೂ ಸಾರ್ವಜನಿಕರ ಮುಂದೆ ಮಾಡಿದ ಫಲಪ್ರದವಾದ ಓಜಸ್ವೀ ಭಾಷಣಗಳ ಮೂಲಕ ಮಾನ್ಯ ಶಾಸ್ತ್ರಿಗಳು ದ. ಆಫ್ರಿಕದಲ್ಲಿ ಅಲ್ಲಿಯ ಹಿಂದೀಯರ ಪರವಾಗಿ ಒಪ್ಪಂದವನ್ನು ಮಾಡಿದುದರಿಂದ, ಹಿಂದೀ ವಸಾಹತುಗಾರರು, ಅವರಿಗೆ ತಮ್ಮ ಅಪಾರ ಕೃತಜ್ಞತೆಯನ್ನು ಸಲ್ಲಿಸಿದರು. ಅಲ್ಲದೆ, ಹಿಂದೂಸ್ಥಾನದ ಮುಂದಾಳುಗಳು ಅವರನ್ನು ಸ್ತುತಿಸಿದರು. ಡರ್ಬಾನದಲ್ಲಿ ಹಿಂದೀ ವಿದ್ಯಾರ್ಥಿಗಳಿಗೊಂದು ಕಾಲೇಜಿನ ಅವಶ್ಯಕತೆಯನ್ನು ಕಂಡು ಅದಕ್ಕಾಗಿ ಒಂದು ನಿಧಿಯನ್ನು ಮಾನ್ಯ ಶಾಸ್ತ್ರಿಗಳು ಏರ್ಪಡಿಸಿದರು. ೨೦,೦೦೦ ಪೌಂಡು ವಂತಿಗೆಯು ಕೂಡಲೇ ಸಂಗ್ರಹವಾಯಿತು. ಮಾನ್ಯ ಶಾಸ್ತ್ರಿಗಳ ಗೌರವಾರ್ಥವಾಗಿ "ಶಾಸ್ತ್ರಿ ಕಾಲೇಜ್" ಎಂಬುದಾಗಿ ಆ ವಿದ್ಯಾ ಪೀಠಕ್ಕೆ ನಾಮಕರಣ ಮಾಡಲಾಯಿತು. ೧೯೩೫ರಲ್ಲಿ ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್ ಜಾರಿಗೆ ಬಂದ ಅನಂತರ ಕಾಂಗ್ರೆಸಿಗರು, ತಮ್ಮ ಮಂತ್ರಿಮಂಡಲ ರಚನೆಯ ಬಗ್ಗೆ ಶರತ್ತುಗಳನ್ನು ಕೇಳಿ ಹೊರಗೆ ನಿಂತಾಗ, ಒಂದು ತಾತ್ಕಾಲಿಕ ಹಂಗಾಮಿ ಮಂತ್ರಿಮಂಡಲ (Interim Ministry)ವನ್ನು ರಚಿಸಲು ಮಾನ್ಯ ಶಾಸ್ತ್ರಿಗಳನ್ನು ಭಾರತ ಸರಕಾರವು ಎನಂತಿಸಿಕೊಂಡಿತು; ಆದರೆ ಅವರು ನಿರಾಕರಿಸಿದರು. ಯಾಕೆಂದರೆ ಹಾಗೆ ಮಾಡಿದರೆ ತೀರಾ ಅಕ್ರಮವನ್ನು ಮಾಡಿದಂತಾಗುವುದೆಂದು ಅವರು ಮನಗಂಡಿದ್ದರು.

೧೭ ವರ್ಷಗಳ ವರೆಗೆ, ಅಧ್ಯಾಪಕ ವೃತ್ತಿಯಲ್ಲಿ ಮೊದಲೇ ನುರಿತ ಮಾನ್ಯ ಶಾಸ್ತ್ರಿಗಳು, ೧೯೩೫ರಲ್ಲಿ ಅನ್ನಾಮಲೈ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ ಸ್ಥಾನವನ್ನು ವಹಿಸಿದರು ಮತ್ತು ೨ ವರ್ಷಗಳ ವರೆಗೆ ಆ ಸ್ಥಾನದಲ್ಲಿ, ಉಳಿದರು. ಈ ಅವಧಿಯಲ್ಲಿ ಭಾರತದ ಸರಕಾರವು, ಮಲಯದ ಹಿಂದೀ ಕೂಲಿಕಾರರ ಪರಿಸ್ಥಿತಿಯನ್ನು ತಿಳಿದು, ತನಗೆ ವರದಿಯನ್ನೊಪ್ಪಿಸಬೇಕೆಂದು ಒತ್ತಾಯಿಸಿದಾಗ, ಅವರು ಪುನಃ ಮಲಯಕ್ಕೆ ಹೋದರು. ೧೯೩೫ರ ಕಾನೂನಿನನ್ವಯ ಘಟನೆ ಹೊಂದಿದ ಮದ್ರಾಸಿನ ಹೊಸ ಶಾಸನಮಂಡಲಕ್ಕೆ ಮಾನ್ಯ ಶಾಸ್ತ್ರಿಗಳು ನೇಮಕಗೊಂಡರು.

ವಯೋಭಾರವು ಅವರ ಉತ್ಸಾಹವನ್ನು ಒಂದಿಷ್ಟೂ ಕುಂದಿಸಲಿಲ್ಲ, ಭಾರತವು ಜಗತ್ತಿನಲ್ಲಿ ಒಂದು ಪ್ರಬಲಯುತ ರಾಷ್ಟ್ರವಾಗಬೇಕೆಂದು ಅವರು ಆಶಿಸಿದರು. ಜಿನ್ನಾ ಸಾಹೇಬರ ಪಾಕಿಸ್ತಾನ ಕೇಳಿಕೆಯು ಬೆಳೆದಾಗ, ಭಾರತವು ಎಚ್ಚೆದಿಸಲ್ಪಟ್ಟರೆ, ಪ್ರಪಂಚದ ವ್ಯವಹಾರ ರಂಗದಲ್ಲಿ, ಅದು ಒಂದು ಬಲಿಷ್ಠ ಶಕ್ತಿಯಾಗಿ ಉಳಿಯದೆ ಅದರ ಭವಿತವ್ಯವೇ ನಾಶವಾಗುವುದೆಂದು ಮಾನ್ಯ ಶಾಸ್ತ್ರಿಗಳು—ವೃದ್ಧಾಪ್ಯದಿಂದ ದುರ್ಬಲಪಟ್ಟದರೂ ಕೂಡ ತೀವ್ರ ಪ್ರಚಾರ ಕಾರ್ಯವನ್ನು ಕೈಕೊಂಡರು. ಮುಸ್ಲಿಂ ಲೀಗಿನ ಕೇಳಿಕೆ ಇಲ್ಲವೆ ಹಕ್ಕಿನ ಸಮಸ್ಯೆಯನ್ನು ಒಂದು ಅಂತರಾಷ್ಟ್ರೀಯ ಮಧ್ಯಸ್ಥಿಕೆಗೆ ಕೊಟ್ಟು ಆ ಮೂಲಕ ತೀರ್ಮಾನಿಸುವ ಒಂದು ಸೂಚನೆಯನ್ನು ಅವರು ಮಾಡಿದರು. ಈ ಸೂಚನೆಯು ಈಚಿಗೆ ಶ್ರೀ ಸಿ. ರಾಜಗೋಪಾಲಾಚಾರ್ಯ ಹಾಗೂ ಗಾಂಧೀಜಿಯರ ಒಪ್ಪಿಗೆಯನ್ನು ಗಳಿಸಿರುತ್ತದೆ.

ಗಾಂಧಿಜಿ ಮತ್ತು ಶಾಸ್ತ್ರಿಗಳು

ಗಾಂಧಿಜಿ ಮತ್ತು ಮಾನ್ಯ ಶಾಸ್ತ್ರಿಗಳೊಳಗಿನ ಮಿತ್ರತ್ವವು ಅಳವಾಗಿರುತ್ತದೆ. ಅವರು ರಾಜಕೀಯದಲ್ಲಿ ಭಿನ್ನಾಭಿಪ್ರಾಯವನ್ನು ವಹಿಸಿದ್ದರೂ, ಅವರೊಳಗಿನ ಪ್ರೀತಿಭಾವವು ಒಂದು ಆಶ್ಚರ್ಯವೆರುತ್ತದೆ. ಮಾನ್ಯ ಶಾಸ್ತ್ರಿಗಳು ಗಾಂಧೀಜಿಯವರ ಸಾಮೂಹಿಕ ಅಸಹಕಾರ ಚಳವಳಿಕ್ಕೆ ತನ್ನ ಅಸಮ್ಮತಿಯನ್ನು ಪ್ರದರ್ಶಿಸಿದ್ದರು. ೧೯೨೪ರಲ್ಲಿ ಗಾಂಧೀಜಿಯವರು ಬೇನೆ ಬಿದ್ದು, ಅವರಿಗೆ ಶಸ್ತ್ರ ಚಿಕಿತ್ಸೆಯನ್ನು ನಡೆಸಿದಾಗ, ಮಾನ್ಯ ಶಾಸ್ತ್ರಿಗಳೊಬ್ಬರೇ ತನ್ನ ಸಮೂಪದಲ್ಲಿ ಇರಲು ಅವರು ಇಚ್ಛಿಸಿದರು. ಈ ವರುಷ ಈಚಿಗೆ ಗಾಂಧೀಜಿಯವರು ಮದ್ರಾಸಿಗೆ ಬಂದಿದ್ದಾಗ, ರೋಗಗ್ರಸ್ತರಾಗಿ ಹಾಸಿಗೆ ಹಿಡಿದ ಮಾನ್ಯ ಶಾಸ್ತ್ರಿಗಳನ್ನು ಮೂರು ಬಾರಿ ಅವರ ಮನೆಗೆ ಬಂದು ಕಂಡು, ಅವರನ್ನು ಪ್ರೀತಿಪೂರ್ವಕವಾಗಿ ವಿಚಾರಿಸಿದ್ದರು.

ಅವರು ರಾಜಕಾರಣದಲ್ಲಿ, ಒಬ್ಬ ಉದಾರ ವಾದಿಯಾಗಿದ್ದು, ಉದಾರವಾದಿ ತತ್ವ ಭವಿಷ್ಯವನ್ನು ಅವರು ಮೇಲ್ಮಟ್ಟಕ್ಕೆ ಏರಿಸಿದರು. ನೆಹರು ಅವರನ್ನು ಭಾರತದ ಒಬ್ಬ ಅತ್ಯಂತ ಸಮರ್ಥ ಉದಾರ ವಾದಿ ಎಂದು ಕರೆದಿದ್ದರು ಭಾರತದ ಪ್ರಾಚೀನ ಸಂಸ್ಕೃತಿ ಹಾಗೂ ಸಾಹಿತ್ಯದ ಜ್ಞಾನವು ಅವರಿಗೆ ಅಪಾರವಾಗಿತ್ತು. ಅವರು ತನ್ನ ಜೀವಿತದ ಕಡೆಯ ಭಾಗವನ್ನು, ಭಾರತದ ಪುರಾಣೇತಿಹಾಸಗಳ ಪರಿಶೋಧನೆ, ಪ್ರಕಟನೆಗಳನ್ನು ಮಾಡುವ ಕಾರ್ಯಗಳಲ್ಲಿ ಕಳೆದರು. ರಾಮಾಯಣದ ಮೇಲೆ ಉದ್ದಾಮ ಉದಾತ್ತ ಘನ ಗಂಭೀರ ಭಾಷಣಗಳನ್ನು ಕೊಡುತ್ತ, ನೆರೆದ ಜನರನ್ನು ಮೈಮರೆಯುವಂತೆ ಮಾಡುತ್ತಿದ್ದರು. ಕರ್ನಾಟಕ ಸಂಗೀತದಲ್ಲಿ ಅವರಿಗೆ ತುಂಬ ಅಭಿರುಚಿ ಇತ್ತು.

ಈ ಮಹನೀಯರು ಪ್ರಚಂಡ ವಾಗ್ಮಿ ಲಾಯಿಡ್ ಜಾರ್ಜ್‌ರಂತಹ ರಾಜಕಾರಣ ಮುಂದಾಳುಗಳೂ ಅವರನ್ನು—"ರಜತ ನಾಲಗೆ ಇರುವ ವಾಗ್ಮಿ" ಎಂದೇ ಕರೆದಿರುತ್ತಾರೆ. ಮಾನ್ಯ ಶಾಸ್ತ್ರಿಗಳು ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅತುಲ ಪಾಂಡಿತ್ಯವನ್ನು ಸಂಪಾದಿಸಿದ್ದರು ಕಲ್ಕತ್ತ ವಿಶ್ವವಿದ್ಯಾಲಯದವರು ಏರ್ಪಡಿಸಿದ್ದ ಕಮಲಾ ಭಾಷಣ ವಿಭಾಗದಲ್ಲಿ ಅವರಿತ್ತ ಉಪನ್ಯಾಸಗಳೂ, ಅವರ ಗುರು ಗೋಖಲೆ ಹಾಗೂ ಸರ್. ಫಿರೋಜ ಶಾ ಮೆಹತಾ ಅವರ ಜೀವನ ಚರಿತದ ಕುರಿತು ಮಾಡಿದ ಅಮೋಘ ಉಪನ್ಯಾಸಗಳೂ ಅವರ ಪತ್ರಗಳ ಸಂಗ್ರಹವೂ ಇವುಗಳು ಗ್ರಂಥ ರೂಪದಿಂದ ಹೊರಬಿದ್ದಿರುತ್ತವೆ.

—೫೦೫—

ಹುಳುಕಡ್ಡಿ ಮದ್ದು

RINGWORM OINTMENT AMRUTANJAN BOMBAY. MADRAS. CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ—ಮದ್ರಾಸ್—ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆವುದು

THE BOMBAY— CO-OPERATIVE INSURANCE SOCIETY LTD. BOMBAY.

ಬೋಂಬೆ ಕೊ-ಒಪರೇಟಿವ್ ಇನ್ಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್, ಬೋಂಬೆ.

ವಿಮಾಕಾರ್ಯಗಳ ವಿಶೇಷ ಯೋಜನೆಗಳು ಪ್ರತ್ಯೇಕವಾಗಿ ಗ್ರಾಮಾಂತರ ಶಾಖೆಯ

ಪಾಲಿಸಿಗಳು

ನಿಮ್ಮ ಜೀವವಿಮೆಗಾಗಿ ಅಥವಾ

ಪ್ರಾತಿನಿಧ್ಯಕ್ಕಾಗಿ ಯಾವಾಗಲೂ ಇವರೊಡನೆ ಆಲೋಚಿಸಿರಿ,

"ಬೋಂಬೆ ಕೊ-ಒಪರೇಟಿವ್"

ದಿ ನ್ಯೂ ಇಂಡಿಯಾ ಕೊ., ಲಿಮಿಟೆಡ್,
ಚೀಫ್ ಏಜಂಟರು,
44, ಲಜ್ ಚರ್ಚ್ ರೋಡ್, ಮೈಲಾಪುರ
ಮದ್ರಾಸು.

ಎಂ. ಟಿ. ಕೊರ್ಡೇಲ್,
ಸುಪರಿಂಟೆಂಡೆಂಟ್ ಒಫ್ ಏಜನ್ಸೀಸ್,
ಹಂಪನಕಟ್ಟಾ, ಮಂಗಳೂರು.

CANARA BANK LIMITED

(ESTD. 1906.)

(Incorporated in British India-Liability of Members Limited)

SEASON DEPOSITS.

of Rs. 10,000/— and over in multiples of Rs 1000/— and maturing within 30th September 1946 are now accepted at the following rates:—

3 months	....	2½%
4 to 5 months	....	2¾%
6 to 9 months	....	2¾%

Rates for Season Deposits of less than Rs. 10,000/- with a minimum of Rs. 1000/- and in multiples of Rs 500/-may be ascertained on application to our nearest branch.

ದಿ ಬೊಂಬೆಲ್ಯಾಫ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.

1908ರಲ್ಲಿ ಸ್ಥಾಪಿಸಲ್ಪಟ್ಟದ್ದು

ಶಾಂತಿ ಮತ್ತು ಭದ್ರತೆ

ಯುರೋಪಿನ ಪೀಡಿಸಲ್ಪಟ್ಟ ಜನಾಂಗಗಳಿಗಾಗಿ ಸ್ವಾತಂತ್ರ್ಯವನ್ನು ಗಳಿಸಿ ಕೊಂಡಿದ್ದ ಆ ಪ್ರಚಂಡ ಯುದ್ಧ ಮುಗಿಯಿತು. ಆ ನಾಲ್ಕು ಸ್ವಾತಂತ್ರ್ಯ ಗಳನ್ನು ಸಂಪಾದಿಸಿ ಕೊಡಲು ಹಲವಾರು ಯತ್ನಗಳಾದರೂ ನಾವು ಅದರ ಸಮಾಪದಲ್ಲೆಲ್ಲಿಯೂ ಇದ್ದಂತೆ ತೋರುವುದಿಲ್ಲ. ನಾವು ಎಮೆಯ ಸೇವೆಯನ್ನು ಬಯಸುವವರೆಲ್ಲರಲ್ಲಿಯೂ ಆ ಸೇವಾ ಕ್ರಮವನ್ನು ಹರಡಿಸುವ ಮೂಲಕ, ಯುದ್ಧ ಕಾಲದಲ್ಲಿಯೂ ಶಾಂತಿ ಸಮಯದಲ್ಲಿಯೂ ಈ ವೈಯಕ್ತಿಕ ವಾಸ್ತವಿಕ ಸ್ವಾತಂತ್ರ್ಯ ಸಿದ್ಧಿ ಕಾರ್ಯದಲ್ಲಿ ನಮ್ಮ ನಮ್ಮ ರೀತಿಯಲ್ಲಿ ಸಹಾಯ ಮಾಡುತ್ತಿದ್ದೇವೆ.

1945ರಲ್ಲಿ ಪೂರ್ಣವಾದ ವ್ಯವಹಾರ } ಕಂಪನಿಯದು: **2½** ಕೋಟಿಗೂ ಮಿಕ್ಕಿ ನಮ್ಮದು: ಸುಮಾರು **50**ಲಕ್ಷ

ಕೊಚ್ಚಿಕಾರ ಸಹೋದರರು ಲಿಮಿಟೆಡ್,

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು ಬೊಂಬಯಿ ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ಸ್ಪೆಶಲ್ ಏಜೆಂಟರು.

"ಬೊಂಬಯಿ ಲ್ಯಾಫ್ ಬಿಲ್ಡಿಂಗ್ಸ್"

ಗಾಂಧಿ ನಗರ, ಉಡುಪಿ.

ಆಫೀಸುಗಳು ಇರುವ ನಗರಗಳು:—

ಬೊಂಬಯಿ, ಬೆಂಗಳೂರು, ಕಲ್ಲಿಕೋಟೆ, ಮಧುರೆ, ಮಂಗಳೂರು, ಮದ್ರಾಸು ಮತ್ತು ತ್ರಿವೆಂಡ್ರವ್.

ದಕ್ಷಿಣ ಭಾರತದಲ್ಲೆಲ್ಲ ಏಜೆನ್ಸಿಗಳಿವೆ.

THE UNITED KARNATAK INSURANCE CO., LTD.

H. O.: Dharwar. Estd: 1929.

Glad to announce the business increase in 1945 is

400% of that of in 1944.

We entertain young, energetic, and ambitious persons, as agents, special agents, Organisers and Inspectors under our expansion scheme.

A. S. Kini,
Managing Director.

Please apply to:
BRANCH MANAGER,
Court Road, UDIPI.

Or M/s. M. N. BHANDARY & Co.,
Kodialbail, MANGALORE.

ಖಾತ್ರಿ ಬಣ್ಣದ ಆಧುನಿಕ ನಮೂನೆಯ
ಶ್ರೇಷ್ಠ ತರಗತಿಯ
80 ಮತ್ತು 100 "ಕೌಂಟ್" ಸೀರೆಗಳು
ಮತ್ತು
ಕೈ ಮಗ್ಗದ ಮೆಟಿ ವ್ಯಾಲುಗಳು

ಪಡಕೊಳ್ಳುವ ಮುಂಚೆ JNC ಗುರುತನ್ನು ನೋಡಲು ಮರೆಯದಿರಿ.

ಜೆ. ನಾರಾಯಣ ಸಾಮಿ ಚೆಟ್ಟಿ ಎಂಡ್ ಕೊ.,
ಖಂ ವ್ಯಾಪಾರ 18/498 ರಂಗೈ ಗೌಡರ ರಸ್ತೆ
ಕೊಯಂಮುತ್ತೂರು.

☞ **Machine to increase your Resources** ☜

Rs. 89 8 0 will fetch Rs. 100

Jaya Cash Certificates

For particulars apply to:—

The Bank of Mangalore Ltd.

HEAD OFFICE: CAR STREET, MANGALORE.

BRANCHES:— ○ Bunder ○ Moodabidri ○ Vittal ○ Mangalore ○ Padubidri ○ Badiadka and ○ Uppinangadi

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾ ಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನು ಕೊಡುವುದು. 8 ಔನ್ಸಿನ ಬಾಟ್ಲಿಗೆ ರೂಪ್ಯಾ 2—4—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳಿಂದ ಮುಕ್ತಳ್ವಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ೧ಕ್ಕೆ ರೂ. 4—0—0. ಅಂಚೆವೆಚ್ಚ ಬೇರೆ.

ಕಸ್ತೂರಿ ಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ. ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಆರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ವಿ. ಸೂ. ಮೇಲಿನ ಕ್ರಯವು ಬಜಾರ ಧಾರಣೆಗೆ ಅನುಸರಿಸಿ ಇರುತ್ತದೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯಿದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

THE
Pie-Money Bank, Ltd.,
Maidan Road, MANGALORE.

Undertakes all kinds of Banking Business. Current account at 1% per annum. Savings Bank Deposits at 4% per annum.

FIXED DEPOSITS.
For 2 years 4½% 1 year 4%
For 6 months 3½% 3 months 3%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—
K. R. Guru,
Managing Director.

ವೆಂಕಟಗಿರಿಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತ ವಾಗುವಂತೆ ಗೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೫೯ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ. ಮುದ್ದಾದ ಮುದ್ರಣ.

ಬೆಲೆ ರೂಪ್ಯಾ ೧-೮-೦ ಟಪ್ಪಾಲು ಹಾಸಲು ಬೇರೆ.
ಸಂಸ್ಕೃತ

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

JAYA LAXMI BANK, LTD.,

HEAD OFFICE:
MANGALORE.
(ESTD. 1923.)

Our steady progress for the last 22 years inspires confidence both in the depositing and the borrowing public.

Curteous and Prompt Service.

For all further information kindly call on:

M. Narain Shanker,
MANAGER,
Head Office.

Printed & Published by M. Baburaya Prabhu, B. A., at the Mangalore Press, Car-Street, Mangalore Editor: Hurli Bhima Rao